# ಅಧ್ಯಾಯ 7

# ಸಾರಿಗೆ ಮತ್ತು ಸಂಪರ್ಕ

ಹಿಂದಿನ ಕೊಡಗು ರಾಜ್ಯದ ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಯ ಬಗ್ಗೆ ಲಭ್ಯವಿರುವ ಮಾಹಿತಿಗಳು ಅತ್ಯಲ್ಪ. ದಟ್ಟ ಅರಣ್ಯಗಳು ಹಾಗೂ ದುರ್ಗಮ ಪ್ರದೇಶಗಳಿಂದ ಆವೃತವಾದ ಕೊಡಗಿನಲ್ಲಿ ರಸ್ತೆಗಳು ಇರಲೇ ಇಲ್ಲ; ಬಂಡಿ ದಾರಿಗಳೂ ಆ ಕಾಲದಲ್ಲಿ ಇದ್ದಂತೆ ಇಲ್ಲ. ನಡೆದು ಇಲ್ಲವೆ ಕುದುರೆಯ ಸವಾರಿಯಿಂದ ಸಾಗುವುದು ಸಾಧ್ಯವಿತ್ತು. ಹೇರೆತ್ತುಗಳೇ ಸಾಮಗ್ರಿ ಸಾಗಣೆಗೆ ಸಾಧನ. ಹೊರಗಡೆ ಸಂಪರ್ಕ ಕಲ್ಪಿಸುತ್ತಿದ್ದ ಕಾಲು ದಾರಿಗಳಲ್ಲಿ ಒಂದಾದ ಹೆಗ್ಗಳ ಕಣಿವೆಯು ವೀರರಾಜಪೇಟೆ ದಕ್ಷಿಣಕ್ಕಿರುವ ಹೆಗ್ಗಳ ಗ್ರಾಮದಿಂದ ಹೆಸರು ಪಡೆದಿದೆ. ಟಿಪ್ಪು ಸುಲ್ತಾನನು ಈ ಕಣಿವೆಯ ಮೂಲಕವೇ ಕೊಚ್ಚಿ ಮತ್ತು ತಿರುವಾಂಕೂರು ರಾಜರ ಮೇಲೆ ಯುದ್ಧಕ್ಕೆ ಹೋಗಿದ್ದನೆಂದು ಹೇಳಲಾಗಿದೆ. ತಲಚೇರಿಯಿಂದ ಬ್ರಿಟಿಷ್ ಸೈನ್ಯವು ಹೆಗ್ಗಳ ಘಟ್ಟದ ಮೂಲಕವಾಗಿ ಮೈಸೂರು ಕಡೆಗೆ ಸಾಗಿತು. ಈ ಸಲುವಾಗಿ ವೀರರಾಜೇಂದ್ರನು ಘಟ್ಟದ ಮಾರ್ಗವನ್ನು ಸರಿಪಡಿಸಿದ್ದನು. ಹೊರಗಿನ ಆಕ್ರಮಣದ ಭಯದಿಂದ ರಾಜರ ಕಾಲದಲ್ಲಿ ರಸ್ತೆಗಳ ನಿರ್ಮಾಣಕ್ಕೆ ಗಮನ ಹರಿಸಲಿಲ್ಲ. ಸಂಪಾಜೆಯಿಂದ ಮಂಗಳೂರು ಹಾಗೂ ಸುಬ್ರಹ್ಮಣ್ಯಗಳಿಗೆ (ಪುಷ್ಪಗಿರಿ ದಾಟಿ) ಹೋಗಲು ಕೂಡ ಕಾಲದಾರಿಗಳು ಇದ್ದವು. ಕುಶಾಲನಗರದಿಂದ ಕಾವೇರಿ ನದಿ ದಾಟಿ ಪಿರಿಯಾಪಟ್ಟಣಕ್ಕೂ, ಸಿದ್ದಾಪುರದಿಂದ ಪಿರಿಯಾಪಟ್ಟಣಕ್ಕೂ, ತಿತಿಮತಿಯಿಂದ ಹುಣಸೂರಿಗೂ ಕಾಲುದಾರಿಗಳಿದ್ದವು. ಕೊಡಲಿಪೇಟೆಯಿಂದ ಪಶ್ಚಿಮಕ್ಕೆ ಸಕಲೇಶಪುರ, ಪೂರ್ವಕ್ಕೆ ಅರಕಲಗೂಡಿಗೆ ಕಾಲುದಾರಿಯಿತ್ತು. ಕಾವೇರಿ, ಹೇಮಾವತಿ (ಉತ್ತರದಲ್ಲಿ), ಲಕ್ಷ್ಮಣತೀರ್ಥ ನದಿಗಳು ಮಳೆಗಾಲದಲ್ಲಿ ದೊಡ್ಡ ಅಡಚಣೆಗಳಾಗಿದ್ದವು. ಹೊರರಾಜ್ಯಗಳಿಗೆ ಸಂಪರ್ಕ ಕಲ್ಪಿಸುತ್ತಿದ್ದ ಕಾಲುದಾರಿಗಳನ್ನು ಒಡೆಯರ ಕಾಲದಲ್ಲಿ ಅಲ್ಲಲ್ಲಿ ಮುಚ್ಚಲಾಗಿತ್ತು. ಎಲ್ಲೆಡೆ ಕಡಂಗಗಳೆಂಬ ಕಂದಕಗಳಿದ್ದು ಅವುಗಳನ್ನು ದಾಟಲು ಇರುವ ಬಕ್ಕ ಬಾಗಿಲು ಎಂಬ ದ್ವಾರಗಳಲ್ಲಿ ಸದಾ ಪಹರೆ ಇರುತ್ತಿತ್ತು. ರಸ್ತೆಗಳಿಲ್ಲದ ಪ್ರಯುಕ್ತ ರಾಜ್ಯದಲ್ಲಿ ದೇಶೀಯ ಎತ್ತಿನಗಾಡಿಗಳು ಇರಲಿಲ್ಲ. ಶ್ರೀಮಂತರು ಕುದುರೆ, ಪಲ್ಲಕ್ಕಿಗಳಲ್ಲಿ ಸಂಚಾರ ಮಾಡುತ್ತಿದ್ದರು. ಬ್ರಿಟಿಷರು ಕೊಡಗನ್ನು ವಶಪಡಿಸಿಕೊಂಡ ನಂತರ ರಸ್ತೆಗಳ ನಿರ್ಮಾಣ ಕಾರ್ಯ ಕೈಗೊಂಡರು. 1834 ರಲ್ಲಿ ಸ್ಯಾಪರ್ಸ್ ಮತ್ತು ಮೈನರ್ಸ್‌ಗಳ ಸೇನಾದಳದ ಒಂದು ತುಕಡಿಯನ್ನು ಇಲ್ಲಿ ಇಟ್ಟಿದ್ದರು. ಲೋಕೋಪಯೋಗಿ ಕಾಮಗಾರಿಗಳನ್ನು ಇವರ ಮೂಲಕ ನಿರ್ವಹಿಸಲಾಗುತ್ತಿತ್ತು. ಬೆಟ್ಟಗುಡ್ಡ, ಕಣಿವೆ, ಅಡವಿಗಳಿಂದ ಅಸಮತಲ ಪ್ರದೇಶವಾದ ಕೊಡಗಿನಲ್ಲಿ ರಸ್ತೆ ನಿರ್ಮಾಣ ಸುಲಭದ ಕಾರ್ಯವಾಗಿರಲಿಲ್ಲ.

ಪ್ರಥಮವಾಗಿ ರಸ್ತೆ ನಿರ್ಮಾಣವನ್ನು ಫ್ರೇಜರ್‌ಪೇಟೆ (ಕುಶಾಲನಗರ) ಯಿಂದ ಮಡಿಕೇರಿಯವರೆಗೆ ಮಾಡಲಾಯಿತು. ಸ್ಯಾಪರ್ಸ್ ಮತ್ತು ಮೈನರ್ಸ್‌ನವರು ಮಾಡಿದ ಮೊಟ್ಟಮೊದಲ ಈ ರಸ್ತೆಯನ್ನು 1835 ರಲ್ಲಿ ಮಡಿಕೇರಿ ಮತ್ತು ಫ್ರೇಜರ್‌ಪೇಟೆ (ಕುಶಾಲನಗರ)ಗಳ ನಡುವೆ (32 ಕಿ.ಮೀ. ಉದ್ದ) ಸಂಚಾರಕ್ಕೆ ತೆರೆಯಲಾಯಿತು. ಫ್ರೇಜರ್‌ಪೇಟೆಯಿಂದ ಮುಂದೆ ಕಾವೇರಿ ನದಿ ಅಡ್ಡ ಬರುತ್ತಿತ್ತು. ಸ್ಯಾಪರ್ಸ್‌ನ

ಕ್ಯಾಪ್ಟನ್ ಅಂಡರ್‌ವುಡ್‌ರವರ ನೇತೃತ್ವದಲ್ಲಿ ನಡೆದ ಈ ಕಾರ್ಯದಲ್ಲಿ ಲೆಫ್ಟಿನೆಂಟ್ ರಂಡಾಲ್, ಡೋರಿಯಾ ಹಾಗೂ ಫಾಸ್ಟ್‌ರವರು ಸಹಾಯಕರಾಗಿ ಸೇವೆ ಸಲ್ಲಿಸಿದರು. ಕುಶಾಲ ನಗರದ ಬಳಿ 1846ರಲ್ಲಿ ಕ್ಯಾಪ್ಟನ್ ಡಬ್ಲ್ಯೂ ಜಿ. ಆನ್‌ಸ್ಲೋ (ಕೊಡಗಿನ ಸೂಪರಿಂಟೆಂಡೆಂಟ್) ಕಾವೇರಿ ನದಿ ಸೇತುವೆಗೆ ಶಂಕು ಸ್ಥಾಪನೆಯನ್ನು ಮಾಡಿದರು. 12-5-1848 ರಂದು ಸಂಚಾರಕ್ಕೆ ತೆರೆಯಲಾಯಿತು. ಈ ಸೇತುವೆಯು 315 ಅಡಿ ಉದ್ದವಾಗಿತ್ತು. ಕುಶಾಲನಗರ ಕೋಟೆಯ ಕಲ್ಲುಗಳನ್ನು ಇದರ ಕಟ್ಟಣೆಗೆ ಬಳಸಲಾಯಿತು.

ಮಡಿಕೇರಿಯಿಂದ ಮಂಗಳೂರು ಮಾರ್ಗವು ಸಂಪಾಜೆ ಘಾಟ್ ಮೂಲಕ ಹಾದು ಹೋಗುತ್ತಿದ್ದು 1837ರಲ್ಲಿ ಇದನ್ನು ಪ್ರಾರಂಭಿಸಲಾಯಿತು. ಇದನ್ನು ಫಾಸ್ಟ್‌ಘಾಟ್ ಎಂಬುದಾಗಿ ಸಹ ಕರೆಯುತ್ತಿದ್ದರು. ನಿಬಿಡಾರಣ್ಯಗಳು ಹಾಗೂ ಬೆಟ್ಟಗುಡ್ಡಗಳ ನಡುವೆ ರಸ್ತೆ ನಿರ್ಮಿಸುವಾಗ ಅನೇಕ ಅಡ್ಡಿ ಅಡಚಣೆಗಳು ಎದುರಾದರೂ ಫಾಸ್ಟ್ ಎಂಬ ತರುಣ ಎಂಜಿನಿಯರ್ ಈ ಯೋಜನೆಯನ್ನು ರೂಪಿಸಿ ರಸ್ತೆ ನಿರ್ಮಾಣ ಪ್ರಾರಂಭಿಸಿದ ನಂತರ ಇದೇ ಸ್ಥಳದಲ್ಲಿ ಮಲೇಜ್ವರಕ್ಕೆ ತುತ್ತಾಗಿ ಆತ ಅಸುನೀಗಿದನು. ಈ ರಸ್ತೆಯನ್ನು ಆಗ ಎತ್ತಿನ ಗಾಡಿಗಳ ಸಂಚಾರಕ್ಕೆ ಅನುಕೂಲವಾಗುವಂತೆ ನಿರ್ಮಿಸಲಾಗಿತ್ತು. ಕಲ್ಲುಗಳನ್ನು ಒಡೆದು ಸಾಗಿಸಲು ಹಾಗೂ ಕಡಿದ ಮರಮುಟ್ಟು ಇತ್ಯಾದಿಗಳನ್ನು ಸಾಗಿಸುವ ವೆಚ್ಚವು (ಸೇತುವೆಗಳ ನಿರ್ಮಾಣ ಬಿಟ್ಟು) ಆಗ 1 ಮೈಲಿಗೆ ಸುಮಾರು 3,500 ರೂಪಾಯಿ ಗಳಾಯಿತು. ಇದರಲ್ಲಿ ಸ್ಯಾಪರ್ಸ್ ಮತ್ತು ಮೈನರ್ಸ್‌ಗಳ ಸಂಬಳ ಹಾಗೂ ಉಪಕರಣಗಳ ವೆಚ್ಚ ಇದರಲ್ಲಿ ಸೇರಿಲ್ಲ. ಇದಕ್ಕೆ ತಗುಲಿದ ವೆಚ್ಚವನ್ನು ತುಂಬಿಸಿಕೊಳ್ಳಲು ಕರಾವಳಿ ಪ್ರದೇಶದಲ್ಲಿ ಉಪ್ಪಿನ ತೆರಿಗೆಯಲ್ಲಿ ಏರಿಕೆ ಮಾಡಲಾಯಿತು. ಈ ರಸ್ತೆಯ ನಿರ್ಮಾಣದಿಂದ ಮಾರುಕಟ್ಟೆಗೆ ಬಾಗಿಲು ತೆರದಂತಾಗಿ ಕೊಡಗಿನ ವ್ಯವಸಾಯಕ್ಕೆ ಉತ್ತೇಜನ ದೊರೆ ಯಿತು. ವಿಸ್ತಾರವಾದ ಕಾಫಿ ತೋಟಗಳು ರಸ್ತೆಯ ಎರಡು ಬದಿಗಳಲ್ಲಿ ಬೆಳವಣಿಗೆಯಾಗತೊಡಗಿ ಈ ಮಾರ್ಗದ ಪ್ರಾಮುಖ್ಯತೆ ಹೆಚ್ಚಾಯಿತು. ಈ ರಸ್ತೆಯ ಮೊದಲ 24 ಮೈಲಿಗಳಲ್ಲಿ ಇಳುಕಲು ಒಟ್ಟು 2,900 ಅಡಿಗಳಷ್ಟಾಗಿತ್ತು. ಸಂಪಾಜೆ, ಸುಳ್ಯ, ಪಾಣೆಮಂಗಳೂರುಗಳಿಂದ ಇದು ಮಂಗಳೂರನ್ನು ತಲುಪುತ್ತಿತ್ತು.

ಸೈನ್ಯದ ಉದ್ದೇಶಕ್ಕೆಂದೇ ನಿರ್ಮಿಸಲಾದ ಹಿಂದಿನ ಕಾಲದ ಮತ್ತೊಂದು ಮುಖ್ಯ ರಸ್ತೆಯು ಕಣ್ಣಾನೂರಿನಿಂದ ಮಡಿಕೇರಿಯ ಕಡೆಗೆ ಪೆರಿಯಂಬಾಡಿ ಘಾಟಿನ ಮೂಲಕ ಬರುತ್ತಿತ್ತು. ಇದು 1849 ರಲ್ಲಿ ಪೂರ್ಣಗೊಂಡಿತು. ಅನಂತರ ವೀರರಾಜಪೇಟೆಯಿಂದ ಮಡಿಕೇರಿಗೆ ರಸ್ತೆ ನಿರ್ಮಿಸಿ ಪೆರಿಯಂ ಬಾಡಿ ರಸ್ತೆಗೆ ಸಂಪರ್ಕ ಕಲ್ಪಿಸಲಾಯಿತು. 1868ರಲ್ಲಿ ಈ ರಸ್ತೆಯನ್ನು ಮಡಿಕೇರಿಯಿಂದ ಕೊಡ್ಲಿಪೇಟೆಗೆ ವಿಸ್ತರಿಸ ಲಾಯಿತು. ಉತ್ತರ ಭಾಗದ ರಸ್ತೆಯು ಸಕಲೇಶಪುರಕ್ಕೆ ಸಂಪರ್ಕ ಕಲ್ಪಿಸುತ್ತದೆ. 1870ರಲ್ಲಿ ನಿರ್ಮಾಣವಾದ ಈ ಹಳೆಯ ರಸ್ತೆ ಸೋಮವಾರಪೇಟೆ–ಕೊಡ್ಲಿಪೇಟೆಯ ಮೂಲಕ ಹಾದು ಹೋಗುತ್ತಿದ್ದು ಇದರ ಬಹುಭಾಗ 18 ಅಡಿಗಳ ಅಗಲವಿದ್ದು ಅಲ್ಲಲ್ಲಿ ಸಣ್ಣ ಹೊಳೆಗಳಿಗೆ ಸೇತುವೆ ನಿರ್ಮಿಸ ಲಾಗಿತ್ತು. ಒಣ ಋತುವಿನಲ್ಲಿ ಈ ಭಾಗದ ಚೋರನ ಹೊಳೆ, ಹಟ್ಟಿ ಹೊಳೆಗಳಿಗೆ ಸೇತುವೆಗಳನ್ನು ಕಟ್ಟಿರದಿದ್ದರೂ, ದಾಟಲು ಅನುಕೂಲಕರವಾಗಿತ್ತು; ಆದರೆ ಮಳೆಗಾಲದಲ್ಲಿ ಗಾಡಿಗಳ ಸಂಚಾರವು ಸಾಧ್ಯವಾಗುತ್ತಿರಲಿಲ್ಲ.

ಮತ್ತೊಂದು ಮುಖ್ಯ ರಸ್ತೆಯು ವೀರರಾಜಪೇಟೆ ಕಡೆ ಯಿಂದ ಮೈಸೂರಿಗೆ ಹೋಗುತ್ತಿದ್ದು ಗಾಡಿಗಳ ಸಂಚಾರಕ್ಕೆ ಅನುಕೂಲವಾಗಿತ್ತು. ಮಡಿಕೇರಿ ಘಾಟಿನ ಕಡಿದಾದ ರಸ್ತೆ ಗಳಲ್ಲಿ ಪ್ರಯಾಣ ಮಾಡುವುದನ್ನು ತಪ್ಪಿಸಿ ಮೈಸೂರು ಮತ್ತು ಮಂಗಳೂರು ನಡುವೆ ನೇರ ಸಂಚಾರವನ್ನು ಏರ್ಪಡಿಸಲು ಲೆ॥ ಕ್ಲಾರ್ಕ್ ಮತ್ತು ಗ್ರಮಾಟ್ಟ್‌ಕಿರವರು ಒಂದು ಹಾದಿ ಯನ್ನು ಕಡಿದು ಪಿರಿಯಾಪಟ್ಟಣ ಮತ್ತು ಸಿದ್ದಾಪುರಗಳ ನಡುವಣ ರಸ್ತೆಯನ್ನು ಸಂಪಾಜೆ ಘಾಟಿನ ರಸ್ತೆಗೆ ಜೋಡಿಸಿ ದರು. 1834ರಿಂದಲೂ ಕೊಡಗು ಪ್ರಾಂತ್ಯದಲ್ಲಿ ಸ್ಯಾಪರ್ಸ್ ಮತ್ತು ಮೈನರ್ಸ್‌ಗಳ ತಂಡವನ್ನು ನೆಲೆಗೊಳಿಸಿ ಅವಶ್ಯವಿದ್ದ ಎಲ್ಲಾ ಸಾರ್ವಜನಿಕ ಕಾಮಗಾರಿಗಳನ್ನು ಇವರ ಮೂಲಕ ಕೈಗೊಳ್ಳಲಾಗುತ್ತಿತ್ತು. ಸ್ಯಾಪರ್ಸ್ ಮತ್ತು ಮೈನರ್ಸ್‌ಗಳನ್ನು ವಾಪಸ್ಸು ಕರೆಸಿಕೊಂಡ ನಂತರ ಒಬ್ಬ ಐರೋಪ್ಯ ಓವರ್ ಸಿಯರ್‌ರವರು ರಸ್ತೆ ಹಾಗೂ ಇತರೇ ಕೆಲಸಗಳ ಉಸ್ತುವಾರಿ ಯನ್ನು ವಹಿಸಿಕೊಂಡರು. 1862ರವರೆಗೆ ಸರ್ಕಾರವು ಕಾಮಗಾರಿಗಳ ಬಗ್ಗೆ ಯಾವ ಇಲಾಖೆಯನ್ನು ತೆರೆದಿರಲಿಲ್ಲ.

1870ರ ಹೊತ್ತಿಗೆ ಕೊಡಗಿನಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹಾಗೂ ಪೂರ್ವದಿಂದ ಪಶ್ಚಿಮಕ್ಕೆ ಸಂಚರಿಸಲು ಹೆದ್ದಾರಿಗಳಾಗಿ ಈ ಎಲ್ಲ ರಸ್ತೆಗಳೂ ಮಡಿಕೇರಿಯಲ್ಲಿ ಸಂಧಿಸುತ್ತಿದ್ದವು. 1865ರಲ್ಲಿ 95 ಮೈಲಿ ಇದ್ದ ರಸ್ತೆಗಳ ಉದ್ದವು 1878ರ ಕೊನೆಯ ವೇಳೆಗೆ 150 ಮೈಲಿಗಳಿಗೆ ಏರಿಕೆಯಾಯಿತು. ಮುಂದೆ 1878–98ರ ನಡುವೆ ಸಿದ್ಧಾಪುರದ ಬಳಿ ಕಾವೇರಿ ನದಿಗೆ ಸೇತುವೆ ಕಟ್ಟಿದ್ದು ಮತ್ತು 54 ಮೈಲಿ ಉದ್ದದ ರಸ್ತೆ ಯನ್ನು ನಿರ್ಮಿಸಿದ್ದು ಮುಖ್ಯ ಸಾಧನೆ. ಕೆಲವು ದೊಡ್ಡ

ಕಾಮಗಾರಿಗಳನ್ನು ನಿರ್ಮಿಸಲು ಕೇಂದ್ರ ಸರ್ಕಾರದಿಂದ ತಜ್ಞ ಇಂಜಿನಿಯರ್‌ಗಳನ್ನು ಬರಮಾಡಿಕೊಳ್ಳಲಾಯಿತು. 1908ರ ಕೊನೆಯಲ್ಲಿ ಕೊಡಗಿನಲ್ಲಿ 288 ಮೈಲಿ ಉದ್ದದ ರಸ್ತೆಗಳು ಮತ್ತು 125 ಹಿರಿಕಿರಿಯ ಸೇತುವೆಗಳು ಇದ್ದವು. ಹಾಗೂ ಕೆಲವು ರಸ್ತೆಗಳಿಗೆ ಜಲ್ಲಿಯನ್ನು ಹಾಕಲಾಗಿತ್ತು. ಬ್ರಿಟಿಷರಿಂದ ನಿರ್ಮಿತವಾದ ರಸ್ತೆಗಳು 1904ರ ಅಂತ್ಯಕ್ಕೆ 215 ಮೈಲಿಗಳಾಗಿದ್ದು, ಇದರ ಪೈಕಿ 147 ಮೈಲಿ ರಸ್ತೆಗಳಿಗೆ ಜಲ್ಲಿ ಹಾಕಲ್ಪಟ್ಟಿತ್ತು. ಇದೇ ಸಮಯದಲ್ಲಿ 130 ಮೈಲಿಗಳ ಲೋಕಲ್‌ಫಂಡ್ ರಸ್ತೆಗಳಿದ್ದು ಇವುಗಳಿಗೆ ಜಲ್ಲಿ ಹಾಕಿರಲಿಲ್ಲ. ಮೊದಲನೇಯ ಮಹಾಯುದ್ಧಕ್ಕೆ ಮುಂಚೆ ಕೊಡಗಿನಲ್ಲಿ 205 ಮೈಲಿ ಉದ್ದದ ಜಲ್ಲಿ ರಸ್ತೆಯಿದ್ದು 1927ರ ಸಮಯಕ್ಕೆ ಅದರ ಪ್ರಮಾಣ 253 ಮೈಲಿಗಳಿಗೆ ಏರಿತು. ರಾಜ್ಯ ಹಾಗೂ ಡಿಸ್ಟ್ರಿಕ್ ಬೋರ್ಡ್‌ಗಳ ಪ್ರಯತ್ನದಿಂದಾಗಿ 1935ರ ವೇಳೆಗೆ ಅನೇಕ ಗ್ರಾಮಗಳಿಗೆ ರಸ್ತೆಗಳ ಸಂಪರ್ಕ ಕಲ್ಪಿಸಲಾಯಿತು. ಇದೇ ಸಾಲಿನಲ್ಲಿ ಕೊಡಗಿನಲ್ಲಿ 253 ಮೈಲಿ ಉದ್ದದ ಜಲ್ಲಿ ರಸ್ತೆಗಳು, 132 ಮೈಲಿ ಗರಸು ರಸ್ತೆ ಮತ್ತು 73 ಮೈಲಿಗಳ ಲೋಕಲ್ ಫಂಡ್ ರಸ್ತೆಗಳಿದ್ದವು. ರಸ್ತೆಗಳಿಗೆ ಆಸ್‌ಪಾಲ್ಟ್ ಹಾಕುವ ಕಾರ್ಯ 1929ರಲ್ಲೇ ಪ್ರಾರಂಭಿಸಲಾಯಿತು. ಮಡಿಕೇರಿ ಫ್ರೇಜರ್‌ಪೇಟೆ ರಸ್ತೆ, ಮಡಿಕೇರಿ–ಸಿದ್ದಾಪುರ ರಸ್ತೆ ಮತ್ತು ಮಡಿಕೇರಿ–ಮಂಗಳೂರು ರಸ್ತೆಗಳ ಕೆಲವು ಭಾಗಗಳಿಗೆ ಡಾಮರನ್ನು 1929ರಲ್ಲಿ ಹಾಕಲಾಯಿತು. ವಿಲೀನಕ್ಕೆ ಮುನ್ನ ಕೊಡಗು ಸಂಸ್ಥಾನದಲ್ಲಿ ಹೊರಗಡೆಗೆ ಸಂಪರ್ಕ ಕಲ್ಪಿಸುತ್ತಿದ್ದ ಹತ್ತು ಮುಖ್ಯ ಮಾರ್ಗಗಳಿದ್ದವು. ಇವುಗಳ ಹೆಸರುಗಳು ಈ ರೀತಿ ಇವೆ :

1. ಮಡಿಕೇರಿಯಿಂದ ಮಂಗಳೂರಿಗೆ-ಸಂಪಾಜೆ ಮೂಲಕ. 2. ಮಡಿಕೇರಿಯಿಂದ ಕೇರಳಕ್ಕೆ–ಮಾಕುಟ್ಟದ ಮೂಲಕ. 3. ಮಡಿಕೇರಿಯಿಂದ ಕೇರಳಕ್ಕೆ–ಮಾಕುಟ್ಟದ ಮೂಲಕ. 4. ಮಡಿಕೇರಿಯಿಂದ ಹುಣಸೂರಿಗೆ-ಕುಶಾಲನಗರದ ಮೂಲಕ. 5. ಮಡಿಕೇರಿಯಿಂದ ಹುಣಸೂರಿಗೆ–ಗದ್ದಿಗೆಯ ಮೂಲಕ. 6. ಮಡಿಕೇರಿಯಿಂದ ಹುಣಸೂರಿಗೆ – ಆನೆ ಚೌಕೂರು ಮೂಲಕ. 7. ಮಡಿಕೇರಿಯಿಂದ ಕೊಣನೂರಿಗೆ-ಶಿರಂಗಾಲದ ಮೂಲಕ. 8. ಮಡಿಕೇರಿಯಿಂದ ಅರಕಲಗೂಡಿಗೆ–ಶನಿವಾರಸಂತೆ ಮೂಲಕ. 9. ಮಡಿಕೇರಿಯಿಂದ ಸಕಲೇಶಪುರ–ಶನಿವಾರಸಂತೆ ಮೂಲಕ, ಹಾಗೂ 10. ಮಡಿಕೇರಿಯಿಂದ ಹಾಸನಕ್ಕೆ-ಕೊಡ್ಲಿಪೇಟೆ ಮೂಲಕ. ಮಡಿಕೇರಿಯಿಂದ ಹೊರಡುವ ಮುಖ್ಯ ರಸ್ತೆಗಳಿಗೆ ಟಾರ್ ಹಾಕಲಾಗಿತ್ತು.

ಕೊಡಗು ರಾಜ್ಯದ ಲೋಕೋಪಯೋಗಿ ಇಲಾಖೆಯನ್ನು 7–7–1947ರಲ್ಲಿ ಕೇಂದ್ರ ಸರ್ಕಾರದ ಲೋಕೋಪಯೋಗಿ ಇಲಾಖೆಯೊಡನೆ ಸೇರಿಸಲಾಯಿತು. ವಿಲೀನದವರೆಗೂ ಇದೇ ಸ್ಥಿತಿ ಇತ್ತು. 1949–50ನೇ ಸಾಲಿನಲ್ಲಿ ಒಟ್ಟು 324 ಮೈಲಿ 4½ ಫರ್ಲಾಂಗ್ ಪ್ರಾಂತೀಯ ರಸ್ತೆಗಳಿದ್ದು ಅದರಲ್ಲಿ 301 ಮೈಲಿ 3 ಫರ್ಲಾಂಗ್ ಉದ್ದದ ರಸ್ತೆಗಳಿಗೆ ಜಲ್ಲಿ ಹಾಕಲಾಗಿತ್ತು. ಜಿಲ್ಲಾ ನಿಧಿ ರಸ್ತೆಗಳ ಉದ್ದ 61 ಮೈಲಿಗಳಷ್ಟಿದ್ದು, ಇದರಲ್ಲಿ 31 ಮೈಲಿ 4 ಫರ್ಲಾಂಗ್ ದೂರಕ್ಕೆ ಜಲ್ಲಿ ಹಾಕಲಾಗಿತ್ತು. ಇಡೀ ರಾಜ್ಯಕ್ಕೆ 1951–52ರವರೆಗೆ ಒಂದು ಲೋಕೋಪಯೋಗಿ ವಿಭಾಗವಿದ್ದು, ಇದು ಮೂರು ಉಪ–ವಿಭಾಗಗಳನ್ನೊಳಗೊಂಡಿತ್ತು. 1955–56ರ ವೇಳೆಯಲ್ಲಿ ಉಪ–ವಿಭಾಗಗಳ ಸಂಖ್ಯೆ 4ಕ್ಕೆ ಏರಿತು. ಇದೇ ಸಮಯದಲ್ಲಿ ಕೊಡಗಿನ ವಿಭಾಗವು 170 ಕಟ್ಟಡಗಳನ್ನೂ, 56 ಸೇತುವೆಗಳನ್ನೂ 392 ಮೈಲಿ ರಸ್ತೆಗಳ ನಿರ್ವಹಣೆಯನ್ನೂ ಮಾಡುತ್ತಿತ್ತು. ದಿನಾಂಕ 31–3–1963ರ ಕೊನೆಯ ವೇಳೆಗೆ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿದ್ದ ಒಟ್ಟು ರಸ್ತೆಗಳ ಉದ್ದ 591 ಮೈಲಿಗಳು. ಸ್ಥಳೀಯ ಸಂಸ್ಥೆಗಳು (ತಾಲೂಕ್ ಅಭಿವೃದ್ಧಿ ಮಂಡಲಿಗಳು) 120 ಮೈಲಿಯಷ್ಟು ರಸ್ತೆಗಳನ್ನು ನಿರ್ವಹಿಸುತ್ತಿದ್ದವು. 112 ಮೈಲಿ ಉದ್ದದ ಅರಣ್ಯ ರಸ್ತೆಗಳಿದ್ದು, ಇದರ ನಿರ್ವಹಣೆ ಅರಣ್ಯ ಇಲಾಖೆಗೆ ಸೇರಿತ್ತು.

ಕೊಡಗಿನಲ್ಲಿ ಬ್ರಿಟಿಷರ ಆಡಳಿತದಲ್ಲಿ ನಿರ್ಮಾಣಗೊಂಡ ಹಳೆಯ ರಸ್ತೆಗಳ ವಿವರವಾದ ಪಟ್ಟಿ

| ರಸ್ತೆಯ ಹೆಸರು | ಪೂರ್ಣಗೊಂಡ ಇಸವಿ | ಉದ್ದ | |
|---|---|---|---|
| | | ಮೈಲಿ | ಫರ್ಲಾಂಗ್‌ಗಳು |
| 1 | 2 | 3 | 4 |
| ಮಡಿಕೇರಿ–ಫ್ರೇಜರ್‌ಪೇಟೆ | 1837 | 20 | 2 |
| ಮಡಿಕೇರಿ–ಸಂಪಾಜೆ ಘಾಟ್ | 1837 | 18 | 0 |

| 1 | | 2 | 3 | 4 |
|---|---|---|---|---|
| ಮಡಿಕೇರಿ–ಪೆರಿಯಂಬಾಡಿ | ಸ. | 1849 | 23 | 4 |
| ಪೆರಿಯಂಬಾಡಿ ಘಾಟ್ | ” | 1849 | 12 | 4½ |
| ಪೆರಿಯಂಬಾಡಿ ಘಾಟ್–ಅನೆಚೌಕೂರು | ” | 1849 | 21 | 3 |
| ಮಡಿಕೇರಿ–ಕೊಡ್ಲಿಪೇಟೆ | | 1868 | 43 | 0 |
| ವೀರರಾಜಪೇಟೆ–ಪಿರಿಯಾಪಟ್ಟಣ | | 1872 | 21 | 3½ |
| ಅಮ್ಮತ್ತಿ–ತಿತಿಮತಿ | | 1878 | 12 | 4 |
| ಕಗ್ಗೋಡ್ಲು–ಕಟಗೇರಿ | ” | 1880 | 1 | 7 |
| ಮಡಿಕೇರಿ–ಸಿದ್ದಾಪುರ | | 1884 | 18 | 0 |
| ವೈನಾಡು | | 1909 | 23 | 6 |
| | | | 216 | 1¾ |

ಸ್ಥಳೀಯ ನಿಧಿಯ ರಸ್ತೆಗಳು (ಲೋಕಲ್ ಫಂಡ್ ರಸ್ತೆಗಳು)

| | | | |
|---|---|---|---|
| ಮಡಿಕೇರಿ–ಭಾಗಮಂಡಲ | 1868 | 20 | 6 |
| ಮಡಿಕೇರಿ–ನಾಲ್ಕುನಾಡು | 1870 | 14 | — |
| ಇದೇ ರಸ್ತೆ ಮುಂದುವರಿಸಿದ್ದು | 1898 | 10 | — |
| ಮೂರ್ನಾಡು–ನಾಪೋಕ್ಲು | 1871 | 6 | ½ |
| ಶನಿವಾರಸಂತೆ–ಶಿರಂಗಾಲ | 1875 | 12 | — |
| ಅರಕಲಗೂಡು–ಸಕಲೇಶಪುರ | 1876 | 7 | 4 |
| ಫ್ರೇಜರ್‌ಪೇಟೆ–ಸಿದ್ದಾಪುರ | 1877 | 11 | 4 |
| ವೀರರಾಜಪೇಟೆ–ಬಿಟ್ಟಂಗಾಲ | 1881 | 3 | 0 |
| ಅಮ್ಮತ್ತಿ–ಮೂರ್ನಾಡು | 1885 | 10 | 0 |
| ಫ್ರೇಜರ್‌ಪೇಟೆ–ಶಿರಂಗಾಲ | 1886 | 11 | 0 |
| ವೀರರಾಜಪೇಟೆ–ನಾಲ್ಕುನಾಡು | 1900 | 11 | 6½ |
| ಕುಶಾಲನಗರ–ಸೋಮವಾರಪೇಟೆ | 1902 | 16 | 0 |
| ಪೊಲ್ಲೀಬೆಟ್ಟ–ಗೋಣಿಕೊಪ್ಪಲು | 1906 | 4 | ¾ |
| ವೀರರಾಜಪೇಟೆ–ಪೊಂಟಿಯಂಗಡಿ | 1907 | 6 | 0 |
| ಶನಿವಾರಸಂತೆ–ಬಿಸ್ಲೆ ಘಾಟ್ | 1907 | 3 | 3 |
| ಜಂಬೂರು–ಸುಂಟಿಕೊಪ್ಪ | 1908 | 6 | 1 |
| ಸುಂಟಿಕೊಪ್ಪ–ಸಿದ್ದಾಪುರ | 1908 | 8 | 7¾ |

ಲೋಕಲ್ ಫಂಡಿನಿಂದ ನಿರ್ವಹಿಸಲ್ಪಡುತ್ತಿದ್ದ ಹಾದಿಗಳು

| | | | |
|---|---|---|---|
| ಜಂಬೂರು–ಸೂರ್ಲಬ್ಬಿ | 1906 | 10 | 4 |
| ಸೋಮವಾರಪೇಟೆ–ಜಕ್ಕನಹಳ್ಳಿ | 1906 | 9 | 6 |

(ಆಧಾರ : ಇಂಪೀರಿಯಲ್ ಗ್ಯಾಸೆಟಿಯರ್ ಆಫ್ ಇಂಡಿಯಾ)

### ರಸ್ತೆಗಳ ವರ್ಗೀಕರಣ

ಸ್ವಾತಂತ್ರ್ಯಾನಂತರ ಜಿಲ್ಲೆಯ ನಾನಾ ಭಾಗಗಳಿಗೆ ಸಂಪರ್ಕ ಕಲ್ಪಿಸಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಯಿತು. ಪಂಚ ವಾರ್ಷಿಕ ಯೋಜನೆಗಳಲ್ಲಿ ರಸ್ತೆಗಳ ಜಾಲವನ್ನು ವಿಸ್ತರಿಸುವುದರ ಜೊತೆಗೆ ರಸ್ತೆಗಳ ಗುಣಮಟ್ಟ ಮತ್ತು ಮೇಲ್ಮೈ ರಚನೆಗಳಲ್ಲಿ ಬಹಳ ಸುಧಾರಣೆ ಮಾಡಲಾಯಿತು. ಯಾವುದೇ ರಾಷ್ಟ್ರೀಯ ಹೆದ್ದಾರಿ ಈ ಜಿಲ್ಲೆಯಲ್ಲಿ ಹಾದು ಹೋಗುವುದಿಲ್ಲ. 1956ನೇ ಇಸವಿಯ ಹೊತ್ತಿಗೆ ಜಿಲ್ಲೆಯಲ್ಲಿ 132 ಕಿ.ಮಿ. ಉದ್ದದ ರಾಜ್ಯ ಹೆದ್ದಾರಿಗಳು ಇದ್ದು 1980ರಲ್ಲಿ ಇವುಗಳ ಉದ್ದ 166 ಕಿ.ಮಿ.ಗಳು ಹಾಗೂ 1990ರಲ್ಲಿ 310.40 ಕಿ.ಮಿ.ಗಳಿಗೆ ಏರಿಕೆಯಾಯಿತು. ಜಿಲ್ಲೆಯ ಅನೇಕ ಭಾಗಗಳಿಗೆ ಸಂಪರ್ಕ ಕೊಂಡಿಯಾಗಿರುವ ಜಿಲ್ಲಾ ಪ್ರಮುಖ ರಸ್ತೆಗಳ ಉದ್ದ 1956ರಲ್ಲಿ 399 ಕಿ.ಮಿ.ಗಳಾಗಿತ್ತು. ನಂತರದ ವರ್ಷಗಳಲ್ಲಿ ಈ ರಸ್ತೆಗಳ ನಿರ್ಮಾಣ ಹೆಚ್ಚಾಗಿ, 1986ರಲ್ಲಿ ಒಟ್ಟು 621 ಕಿ.ಮಿ.ಗಳಷ್ಟಾಯಿತು. ಜಿಲ್ಲೆಯ ಇತರ ರಸ್ತೆಗಳ ಶ್ರೇಣಿಗೆ ಸೇರಿದ 12 ಕಿ.ಮಿ. ಅಮ್ಮತ್ತಿ–ಹೊಸೂರು–ಗೋಣಿಕೊಪ್ಪಲು ಮಾರ್ಗವನ್ನು 1986ರ ನಂತರ ಮೇಲ್ದರ್ಜೆಗೆ ಏರಿಸಲಾಯಿತು. ದಿನಾಂಕ 31-3-1990 ರಲ್ಲಿದ್ದ ಜಿಲ್ಲೆಯ ಪ್ರಮುಖ ರಸ್ತೆಗಳ ಒಟ್ಟು ಉದ್ದ 655 ಕಿ.ಮಿ.ಗಳು. 1987–88ರಲ್ಲಿ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಪ್ರಮುಖ ರಸ್ತೆಗಳ ಹೊರತಾಗಿ ಇತರೇ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯಿಂದ ಕೊಡಗು ಜಿಲ್ಲಾ ಪರಿಷತ್‌ಗೆ ವರ್ಗಾಯಿಸಲಾಯಿತು. ಜಿಲ್ಲೆಯಲ್ಲಿ ಹಾದು ಹೋಗುವ ರಾಜ್ಯ ಹೆದ್ದಾರಿಗಳು ಈ ರೀತಿ ಇವೆ. 1) ರಾಜ್ಯ ಹೆ. 88 ಮೈಸೂರು–ಹುಣಸೂರು–ಪಿರಿಯಾಪಟ್ಟಣ–ಕುಶಾಲನಗರ - ಸುಂಟಿಕೊಪ್ಪ - ಮಡಿಕೇರಿ-ಸುಳ್ಯ ಮತ್ತು ಪುತ್ತೂರು. 2) ರಾ. ಹೆ. 88 ಎ ಹುಣಸೂರು-ವೀರರಾಜಪೇಟೆ. 3) ರಾಜ್ಯ ಹೆ. 88-ಬಿ ಮಡಿಕೇರಿ-ಮಾಕುಟ್ಟ (ಗಡಿಪ್ರದೇಶ, ಕೇರಳದ ಕಣ್ಣಾನೂರಿಗೆ. ಸಿದ್ದಾಪುರ-ವೀರರಾಜಪೇಟೆ ಮೂಲಕ). 4) ರಾಜ್ಯ ಹೆ. 48-ಸಕಲೇಶಪುರ-ಸೋಮವಾರಪೇಟೆ-ಮಡಿಕೇರಿ- ವೀರರಾಜಪೇಟೆ. 5) ಹಳೇಬೀಡು-ಹಾಸನ-ಅರಕಲಗೂಡು-ಪಿರಿಯಾಪಟ್ಟಣ.

ಸದ್ಯದ ಜಿಲ್ಲೆಯ ಪ್ರಮುಖ ರಸ್ತೆಗಳು ಈ ಕೆಳಕಂಡಂತಿವೆ: 1. ಮಡಿಕೇರಿ-ಭಾಗಮಂಡಲ; 2. ಸುಂಟಿಕೊಪ್ಪ-ಸಿದ್ಧಾಪುರ; 3. ಕುಶಾಲನಗರ-ಸಿದ್ಧಾಪುರ; 4. ಬೆಟ್ಟಗೇರಿ-ನಾಲ್ಕುನಾಡು; 5. ಅಮ್ಮತ್ತಿ-ಮೂರ್ನಾಡು; 6. ಕಗ್ಗೋಡು-ಕಟಗೇರಿ; 7. ಜಂಬೂರು-ಸುಂಟಿಕೊಪ್ಪ; 8. ಸೋಮವಾರಪೇಟೆ-ಕೊಣನೂರು; 9. ಹೆಬ್ಬಾಲೆ-ಬಾಣಾವರ; 10. ಕುಶಾಲನಗರ-ಶ್ರೀಮಂಗಲ; 11. ಶನಿವಾರಸಂತೆ-ಬಾಣಾವರ; 12. ಸಿದ್ದಾಪುರ-ಪೊಲ್ಲಿಬೆಟ್ಟ; 13. ಅಮ್ಮತ್ತಿ-ತಿತಿಮತಿ; 14. ಕುಟ್ಟ-ನಾಗರಹೊಳೆ; 15. ಮೂರ್ನಾಡು-ನಾಪೋಕ್ಲು; 16. ಚಿನ್ನಂಗೊಳ್ಳಿ-ಬಾಳೆಲೆ; 17. ವೀರರಾಜಪೇಟೆ-ನಾಲ್ಕುನಾಡು; 18. ವೀರರಾಜಪೇಟೆ-ಪೊಂಟಿಯಂಗಡಿ; 19. ಸಿದ್ದಾಪುರ-ಮೈಸೂರು; 20. ಸೋಮವಾರಪೇಟೆ-ಶಾಂತಳ್ಳಿ-ಕುಂದಳ್ಳಿ; 21. ಭಾಗಮಂಡಲ-ಕರಿಕೆ; 22. ಕುಶಾಲನಗರ-ಸೋಮವಾರಪೇಟೆ; 23. ಹಾಕತ್ತೂರು-ಅಭ್ಯತ್‌ಮಂಗಲ; 24. ಕಡಂಗ-ಬೆಳ್ಳುಮಾಡು-ನಾಪೋಕ್ಲು; 25. ಪೊನ್ನಂಪೇಟೆ-ಕಾನೂರು-ನಿಟ್ಟೂರು; 26. ವೀರರಾಜಪೇಟೆ-ಬೊಯಿಕೇರಿ-ಭಗವತಿ ದೇವಸ್ಥಾನ; 27. ನಾಪೋಕ್ಲು-ಭಾಗಮಂಡಲ; 28. ಅರಕಲಗೂಡು-ಕೊಡ್ಲಿಪೇಟೆ; 29. ಪೆರಿಯಂಬಾಡಿ-ಬಿಟ್ಟಂಗಾಲ; 30. ಶನಿವಾರಸಂತೆ-ಚೆಂಗಡಳ್ಳಿ; 31. ಟಿ. ಶೆಟ್ಟಿಗೇರಿ-ಮೂರ್ನಾಡು; 32. ಪೊಲ್ಲಿಬೆಟ್ಟ-ಗೋಣಿಕೊಪ್ಪಲು 33. ಪೊನ್ನಂಪೇಟೆ-ಹಾತೂರು; 34. ಭಾಗಮಂಡಲ-ತಲಕಾವೇರಿ; 35. ಕಕ್ಕಬ್ಬೆ-ನೆಲಜಿ; 36. ಕತ್ತಲೆಕಾಡು-ಮರಗೋಡು-ಕೊಂಡನಗೇರಿ; 37. ಮಾದಾಪುರ-ಬಿಳಿಗೇರಿ-ಕಿರಗಂದೂರು-ತಾಕೇರಿ; 38. ಹಾನಗಲ್ಲು-ತಲ್ತಾರೆ-ಶೆಟ್ಟಳ್ಳಿ-ತಾಕೇರಿ-ಗರವಾಲೆ; 39. ಕುಂಬೂರ್-ಕಿರಗುಂದೂರು-ತಾಕೇರಿ; 40. ಪೊಲ್ಲಿಬೆಟ್ಟ-ಗಟ್ಟದಳ್ಳ; 41. ಬಿರುನಾಣಿ-ಪರಕಟಗೇರಿ; 42. ಚೆಂಬೆಬೆಳ್ಳೂರು-ಕೊಣಂಜಗೇರಿ; 43. ಟಿ. ಶೆಟ್ಟಿಗೇರಿ-ಬೀರುಗ-ಕುರ್ಚಿ-ಶ್ರೀಮಂಗಲ-ಇರಪು ದೇವಸ್ಥಾನ ರಸ್ತೆ;44. ಚನ್ನಯ್ಯನಕೋಟೆ-ಚನ್ನನಾಗಿಲು-ಅಬ್ಬೂರು 45. ಅಮ್ಮತ್ತಿ-ಹೊಸೂರು-ಗೋಣಿಕೊಪ್ಪಲು; 46. ನಗರೂರು-ಕಿರುಗಂದೂರು; 47. ಮಾದಾಪುರ-ಶಾಂತಳ್ಳಿ-(ದ್ವಾರಾ) ಸೂರ್ಲಬ್ಬಿ; 48. ಕುಮ್ಮಹೊಳೆ-ಹಾತೂರು.

(ಆಧಾರ : ಲೋಕೋಪಯೋಗಿ ಇಲಾಖೆ).

(ತಾಲೂಕವಾರು ಹಾಗೂ ಮೇಲ್ಮೈವಾರ ರಾಜ್ಯ ಹೆದ್ದಾರಿ, ಜಿಲ್ಲಾ ರಸ್ತೆಗಳ ಹಾಗೂ ಇತರ ರಸ್ತೆಗಳ ಸಂಕ್ಷಿಪ್ತ ವಿವರವಾದ ಪಟ್ಟಿಗೆ ಪುಟ 422-424 ನೋಡಿ).

### ಗ್ರಾಮೀಣ ರಸ್ತೆಗಳು

ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳು ಸರ್ವತೋಮುಖ ಪ್ರಗತಿ ಸಾಧಿಸಬೇಕಾದರೆ ಹಳ್ಳಿಗಳಿಗೆ ಸುಲಭವಾಗಿ ಹೋಗಿ ಬರುವಂತಹ ಉತ್ತಮ ಗುಣಮಟ್ಟದ ರಸ್ತೆಗಳ ನಿರ್ಮಾಣ ಮತ್ತು ಹಾಲಿ ಇರುವ ರಸ್ತೆಗಳ ಗುಣ ಮಟ್ಟ ಹೆಚ್ಚಿಸುವುದು ಮತ್ತು ವಿಸ್ತರಿಸುವುದು ಬಹಳ ಅವಶ್ಯವಾಗಿದೆ. ಬಹು ಸಂಖ್ಯೆಯ ಹಳ್ಳಿಯ ಜನರು ವ್ಯವಸಾಯ ಮತ್ತು ತತ್ಸಂಬಂಧ ರಂಗದಲ್ಲಿ

ಜಿಲ್ಲೆಯಲ್ಲಿ ದಿನಾಂಕ 31-3-1990 ರಲ್ಲಿದ್ದ ತಾಲೂಕವಾರು ಹಾಗೂ ಮೇಲ್ಮೈವಾರು ರಾಜ್ಯ ಹೆದ್ದಾರಿ, ಜಿಲ್ಲಾ ರಸ್ತೆಗಳ ಸಂಕ್ಷಿಪ್ತ ವಿವರಣೆ (ಕಿ.ಮೀ.)

| ಸಂಖ್ಯೆ | ತಾಲೂಕುಗಳು | ರಸ್ತೆಗಳ ವರ್ಗೀಕರಣ | | | ರಸ್ತೆಗಳ ಮೇಲ್ಮೈ ವಿವರ ಕಿ.ಮೀ.) | |
|---|---|---|---|---|---|---|
| | | ರಾಜ್ಯ ಹೆದ್ದಾರಿ | ಜಿಲ್ಲಾ ಪ್ರಮುಖ ರಸ್ತೆಗಳು | ಒಟ್ಟು | ಡಾಂಬರು ಹಾಕಿರುವುದು | ಜಲ್ಲಿ ಹಾಕಿರುವುದು |
| 1. | ಮಡಿಕೇರಿ | 71.90 | 190.30 | 262.20 | 260.90 | 1.30 |
| 2. | ಸೋಮವಾರಪೇಟೆ | 111.00 | 221.40 | 332.40 | 318.00 | 14.40 |
| 3. | ವೀರರಾಜಪೇಟೆ | 127.50 | 243.00 | 370.80 | 346.10 | 20.60 |
| | ಒಟ್ಟು | 340.40 | 655.00 | 965.40 | 925.00 | 36.35 |

ಜಿಲ್ಲೆಯಲ್ಲಿ ದಿನಾಂಕ 31-3-1990 ರಲ್ಲಿದ್ದ ತಾಲೂಕುವಾರು ಹಾಗೂ ಮೇಲ್ಮೈಗೆ ಅನುಗುಣವಾಗಿ ಜಿಲ್ಲಾ ಪರಿಷತ್ ರಸ್ತೆ, ತಾಲೂಕ್ ಬೋರ್ಡ್ ಮತ್ತು ಅರಣ್ಯ ಇಲಾಖೆ ವಶದಲ್ಲಿರುವ ರಸ್ತೆಗಳ ವಿವರ (ಕಿ.ಮೀ.ಗಳಲ್ಲಿ).

| ಕ್ರಂ. ಸಂ. | ತಾಲ್ಲೂಕಿನ ಹೆಸರು | ರಸ್ತೆಗಳ ವರ್ಗೀಕರಣ | | | | ರಸ್ತೆಗಳ ಮೇಲ್ಮೈ ವಿವರ | | |
|---|---|---|---|---|---|---|---|---|
| | | ಹಳ್ಳಿಯ ರಸ್ತೆಗಳು | ಡಾಂಬರು ಹಾಕಿರುವುದು | ಜಲ್ಲಿ ಹಾಕಿರುವುದು | ಒಟ್ಟು | ವಾಹನ ಯೋಗ್ಯ ರಸ್ತೆ | ವಾಹನ ಯೋಗ್ಯ ವಲ್ಲದ ರಸ್ತೆ | ಒಟ್ಟು |
| 1. | ಮಡಿಕೇರಿ | | | | | | | |
| | ಜಿಲ್ಲಾ ಪರಿಷತ್ | 227 | 80 | 50 | 130 | 92 | 5 | 97 |
| | ತಾಲೂಕ್ ಬೋರ್ಡ್ | 198 | 3 | 12 | 15 | 8 | 175 | 183 |
| | ಅರಣ್ಯ ಇಲಾಖೆ | 32 | — | — | — | 8 | 24 | 32 |
| | ಒಟ್ಟು | 457 | 83 | 62 | 145 | 108 | 204 | 312 |
| 2. | ವೀರರಾಜಪೇಟೆ | | | | | | | |
| | ಜಿಲ್ಲಾ ಪರಿಷತ್ | 300 | 157 | 105 | 262 | 38 | — | 38 |
| | ತಾಲೂಕ್ ಬೋರ್ಡ್ | 107 | — | 40 | 40 | — | 67 | 67 |
| | ಅರಣ್ಯ ಇಲಾಖೆ | 185 | — | 31 | 31 | 96 | 58 | 154 |
| | ಒಟ್ಟು | 592 | 157 | 176 | 333 | 134 | 125 | 259 |
| 3. | ಸೋಮವಾರಪೇಟೆ | | | | | | | |
| | ಜಿಲ್ಲಾ ಪರಿಷತ್ | 294 | 115 | 105 | 220 | 69 | 5 | 74 |
| | ತಾಲೂಕ್ ಬೋರ್ಡ್ | 317 | 4 | 13 | 17 | 149 | 151 | 300 |
| | ಅರಣ್ಯ ಇಲಾಖೆ | 61 | — | 8 | 8 | 18 | 35 | 53 |
| | ಒಟ್ಟು | 672 | 119 | 126 | 245 | 236 | 191 | 427 |

1956 ರಿಂದ 1990 ನೇ ಸಾಲಿನವರೆಗೆ ಜಿಲ್ಲೆಯಲ್ಲಿದ್ದ ವಿವಿಧ ವರ್ಗಗಳ ರಸ್ತೆಗಳ ಪಟ್ಟಿ.

(ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿಗಳಿಲ್ಲ.)

| ವರ್ಷ | ರಾಜ್ಯ ಹೆದ್ದಾರಿ | ಜಿಲ್ಲಾ ಪ್ರಮುಖ ರಸ್ತೆಗಳು | ಜಿಲ್ಲಾ ಇತರ ರಸ್ತೆಗಳು | ಹಳ್ಳಿಯ ರಸ್ತೆಗಳು | ತಾಲೂಕು ಮಂಡಳಿ ರಸ್ತೆಗಳು | ಅರಣ್ಯ ಇಲಾಖೆ ರಸ್ತೆಗಳು | ಒಟ್ಟು |
|---|---|---|---|---|---|---|---|
| 1956 | 132 | 399 | 100 | — | 97 | 184 | 912 |
| 1961 | 132 | 576 | 60 | 165 | — | 182 | 1,115 |
| 1966 | 132 | 604 | 60 | 251 | 220 | 191 | 1,458 |
| 1969 | 132 | 604 | 60 | 334 | 183 | 237 | 1,550 |
| 1975 | 132 | 604 | 60 | 471 | 660 | 222 | 2,149 |
| 1980 | 166 | 573 | 60 | 739 | 622 | 274 | 2,434 |
| 1985 | 166 | 621 | 12 | 987 | 622 | 278 | 2,686 |
| 1986 | 168 | 621 | 12* | 987 | 622 | 278 | 2,688 |
| 1990 | 310 | 655 | — | 826** | 622 | 278 | 2,691 |

* 12 ಕಿ.ಮೀ. ಉದ್ದದ ಅಮ್ಮತ್ತಿ – ಹೊಸೂರು – ಗೋಣಿಕೊಪ್ಪಲು ರಸ್ತೆಯನ್ನು 1.3.1988 ರಂದು ಮೇಲ್ದರ್ಜೆಗೆ ಏರಿಸಿ ಜಿಲ್ಲಾ ಪ್ರಮುಖ ರಸ್ತೆಯಾಗಿ ಮಾಡಲಾಯಿತು.

** ಜಿಲ್ಲಾ ಪರಿಷತ್ತುಗಳ ರಚನೆಯ ನಂತರ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿದ್ದ ಹಳ್ಳಿಯ ರಸ್ತೆಗಳನ್ನು ಅವುಗಳಿಗೆ ವರ್ಗಾಯಿಸಲಾಯಿತು. ಜಿಲ್ಲಾ ಪರಿಷತ್ತಿನ ಸ್ವಾಧೀನದಲ್ಲಿರುವ ರಸ್ತೆಗಳ ಉದ್ದ 826 ಕಿ.ಮೀ.ಗಳು.

(ಆಧಾರ : ಕೊಡಗು ಜಿಲ್ಲಾ ಪರಿಷತ್ತು)

ನಿರತರಾಗಿರುವುದರಿಂದ ಇವರು ಬೆಳೆಯುವ ಧಾನ್ಯಾದಿಗಳನ್ನು ಮಾರುಕಟ್ಟೆ ಪ್ರದೇಶಗಳಿಗೆ ಸಾಗಿಸಲು ಅಥವಾ ಅಗತ್ಯ ವಸ್ತುಗಳನ್ನು ತರಲು ರಸ್ತೆಗಳ ಮೇಲೆ ಅವಲಂಬಿಸಿರುವುದರಿಂದ ಮಾರುಕಟ್ಟೆ ಪ್ರದೇಶಗಳಿಗೆ ಅಥವಾ ಸಮೀಪದ ಮುಖ್ಯ ರಸ್ತೆಗಳಿಗೆ ಹಳ್ಳಿಗಳಿಂದ ರಸ್ತೆ ಸಂಪರ್ಕ ತುಂಬಾ ಅಗತ್ಯವಾಗಿದೆ.

ರಸ್ತೆಗಳ ಅಭಿವೃದ್ಧಿಗೆ 1958ರಲ್ಲಿ ನಡೆದ ಚೀಫ್ ಎಂಜಿನೀಯರುಗಳ ಸಮ್ಮೇಳನದಲ್ಲಿ ರೂಪಿಸಲಾದ ಯೋಜನೆ ಇಪ್ಪತ್ತು ವರ್ಷಗಳ (1961-81) ಅವಧಿಯಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮಕ್ಕೆ ಅಳತೆ ಗೋಲಾಗಿತ್ತು. ಇದರ ಪ್ರಕಾರ ಅಭಿವೃದ್ಧಿಗೊಂಡ ಮತ್ತು ವ್ಯವಸಾಯ ಪ್ರದೇಶದ ಪ್ರತೀಯೊಂದು ಹಳ್ಳಿಗೆ 6 ಕಿ.ಮೀ. ದೂರದೊಳಗೆ ಜಲ್ಲಿ ಹಾಕಿದ ರಸ್ತೆ ಇರಬೇಕು; ಮತ್ತು ಯಾವುದೇ ವಿಧದ ರಸ್ತೆಯು ಪ್ರತೀಯೊಂದು ಹಳ್ಳಿಯಿಂದ 2.5 ಕಿ.ಮೀ.ನಷ್ಟು ದೂರದಲ್ಲಿ ಇರಬೇಕು. ಅರೆ ಅಭಿವೃದ್ಧಿ ಹೊಂದಿದ ಪ್ರದೇಶಗಳಲ್ಲಿನ ಪ್ರತೀ ಹಳ್ಳಿಗೆ ಜಲ್ಲಿ ಹಾಕಿದ ರಸ್ತೆಯು 12 ಕಿ.ಮೀ. ದೂರದ ಒಳಗಿರತಕ್ಕದ್ದು ಮತ್ತು ಇತರ ಯಾವುದೇ ರಸ್ತೆಯು 5 ಕಿ.ಮೀ. ಅಂತರದ ಒಳಗಿರತಕ್ಕದ್ದು. ಅಭಿವೃದ್ಧಿ ಹೊಂದದ ಹಾಗೂ ವ್ಯವಸಾಯವಿಲ್ಲದ ಪ್ರದೇಶಗಳ ಪ್ರತೀ ಹಳ್ಳಿಗೆ 20 ಕಿ.ಮೀ. ಒಳಗೆ ಜಲ್ಲಿ ರಸ್ತೆ ಇರತಕ್ಕದ್ದು; ಮತ್ತು ಇತರ ಯಾವುದೇ ರಸ್ತೆಯು ಎಂಟು ಕಿ.ಮೀ. ಒಳಗಿನ ಅಂತರದಲ್ಲಿ ಇರತಕ್ಕದ್ದು. ಸರ್ಕಾರವು ಗ್ರಾಮಾಂತರ ರಸ್ತೆಗಳ ಅಭಿವೃದ್ಧಿಗೆ 1959-60 ರಿಂದಲೇ ವಿಶೇಷ ಕಾರ್ಯಕ್ರಮವನ್ನು ಜಾರಿಗೆ ತಂದಿತು. ಈ ಕಾರ್ಯ ಯೋಜನೆಯಲ್ಲಿ ಗ್ರಾಮಾಂತರ ರಸ್ತೆಗಳನ್ನು ನಿರ್ಮಿಸುವುದು ಸಂಪರ್ಕ ರಹಿತ ಭಾಗಗಳಿಗೆ ಸಂಪರ್ಕ ಕಲ್ಪಿಸುವುದು ಹಾಗೂ ಲೋಕೋಪಯೋಗಿ ಇಲಾಖೆಗೆ ಸೇರದ ರಸ್ತೆಗಳಲ್ಲಿ 20 ಅಡಿಗಳಿಗಿಂತ ಹೆಚ್ಚು ಉದ್ದದ ನೀರಿನ ಹರಿವುಗಳಿಗೆ (ಹೊಳೆ) ದೊಡ್ಡ ತೂಬುಗಳನ್ನಿಟ್ಟು ಕೋಡಿ ಸೇತುವೆಗಳನ್ನು (ಕ್ರಾಸ್ ಡ್ರೈನೇಜ್‌ಗಳು) ಕಟ್ಟುವುದು ಸಹ ಸೇರಿತ್ತು. ಈ ರಸ್ತೆಗಳ ಮೇಲ್ಮೈ ಪದರಿಗೆ ಸ್ಥಳೀಯ ಮಣ್ಣು ಗರಸನ್ನು (ಗ್ರ್ಯಾವೆಲ್) ಉಪಯೋಗಿಸಲಾಯಿತು.

ಕನಿಷ್ಟ ಅಗತ್ಯಗಳ ಕಾರ್ಯಕ್ರಮವು (ಎಂ. ಎನ್. ಪಿ.) ಐದನೇಯ ಪಂಚವಾರ್ಷಿಕ ಯೋಜನೆಯಲ್ಲಿ (1-4-1974) ಪ್ರಾರಂಭಿಸಿದ ಒಂದು ಮುಖ್ಯ ಕಾರ್ಯಕ್ರಮ. ಹೆಚ್ಚು ಜನಸಾಂದ್ರತೆಯುಳ್ಳ ಪ್ರದೇಶಗಳಲ್ಲಿ 1,500ಕ್ಕಿಂತ ಜನಸಂಖ್ಯೆ ಜಾಸ್ತಿಯಿರುವ ಹಳ್ಳಿಗಳು ಮತ್ತು ವಿರಳ ಜನಸಂಖ್ಯೆಯ ಪ್ರದೇಶಗಳಲ್ಲಿ 1,000ಕ್ಕಿಂತ ಹೆಚ್ಚು ಜನವಸತಿಯಿರುವ ಹಳ್ಳಿಗಳಿಗೆ ಸರ್ವಋತು ರಸ್ತೆಗಳನ್ನು ನಿರ್ಮಿಸುವುದು ಕನಿಷ್ಟ ಅಗತ್ಯಗಳ ಕಾರ್ಯಕ್ರಮದ ಉದ್ದೇಶ. ರಾಜ್ಯದ ಹಿಂದುಳಿದ ಪ್ರದೇಶಗಳು, ಗುಡ್ಡಗಾಡು ಪ್ರದೇಶಗಳ ಅಭಿವೃದ್ಧಿಗೆ ಹಾಗೂ ಜನವಸತಿಯ ಎಲ್ಲಾ ಹಳ್ಳಿಗಳಿಗೆ ಸರ್ವಋತು ರಸ್ತೆಗಳನ್ನು ಕಲ್ಪಿಸುವ ನಿಟ್ಟಿನಲ್ಲಿ 1978-79ನೇ ಸಾಲಿನಲ್ಲಿ ಒಂದು ಸಮೀಕ್ಷೆಯನ್ನು ನಡೆಸಿ, ಬೃಹತ್ ಯೋಜನೆಯನ್ನು (ಮಾಸ್ಟರ್ ಪ್ಲಾನ್) ತಯಾರಿಸಲಾಯಿತು.

ದಿನಾಂಕ 31.3.1978ನೇ ಸಾಲಿನ ಅಂತ್ಯಕ್ಕೆ ಜಿಲ್ಲೆಯಲ್ಲಿ ವಿವಿಧ ವರ್ಗಗಳ ರಸ್ತೆ ಸಂಪರ್ಕವನ್ನು ಹೊಂದಿದ್ದ ತಾಲೂಕುವಾರು ಹಳ್ಳಿಗಳ ಸಂಖ್ಯೆ. :

| ತಾಲೂಕು | ಸರ್ವ ಋತು ರಸ್ತೆಗಳ ಸಂಪರ್ಕ ಹೊಂದಿದ ಹಳ್ಳಿಗಳು | ಅನುಕೂಲ ಋತುವಿನ ರಸ್ತೆಗಳು | ಕಚ್ಚಾ ಮತ್ತು ವಾಹನ ಯೋಗ್ಯವಲ್ಲದ ರಸ್ತೆ ಇರುವ ಹಳ್ಳಿಗಳು | ಯಾವ ರಸ್ತೆಯೂ ಇಲ್ಲದ ಹಳ್ಳಿಗಳು | ಒಟ್ಟು |
|---|---|---|---|---|---|
| ಮಡಿಕೇರಿ | 41 | 6 | 22 | 4 | 73 |
| ಸೋಮವಾರಪೇಟೆ | 27 | 18 | 53 | — | 98 |
| ವೀರರಾಜಪೇಟೆ | 48 | 15 | 56 | 1 | 120 |
| ಒಟ್ಟು | 116 | 39 | 131 | 5 | 291 |

1983-84ರಿಂದ 31.3.1990ರ ಅಂತ್ಯಕ್ಕೆ ಕನಿಷ್ಟ ಅಗತ್ಯಗಳ ಕಾರ್ಯಕ್ರಮದಡಿಯಲ್ಲಿ ಹಳ್ಳಿಗಳಿಗೆ ಕಲ್ಪಿಸಿದ ಸಂಪರ್ಕ ರಸ್ತೆಗಳ ಪಟ್ಟಿ (ತಾಲೂಕುವಾರಾಗಿ).

| ವರ್ಷ | ಮಡಿಕೇರಿ | ಸೋಮವಾರಪೇಟೆ | ವೀರರಾಜಪೇಟೆ | ಒಟ್ಟು ರಸ್ತೆ ಉದ್ದ (ಕಿ.ಮೀ.) |
|---|---|---|---|---|
| 83–84 | 1 | 2 | 1 | 10.10 |
| 84–85 | — | 2 | — | 4.00 |
| 85–86 | — | 1 | — | 1.30 |
| 86–87 | 1 | — | — | 5.00 |
| 31.3.1990 | 1 | — | 1 | 12.50 |

ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರವು ದಕ್ಷಿಣ ಕನ್ನಡದ ಪ್ರಸಿದ್ಧ ಯಾತ್ರಾ ಸ್ಥಳವೂ ಜಾನುವಾರು ಸಂತೆ ನಡೆಯುವ ಸ್ಥಳವೂ ಆಗಿದ್ದರೂ ಜಿಲ್ಲೆಯಿಂದ ಅದಕ್ಕೆ ಹತ್ತಿರದ ರಸ್ತೆಯಿಲ್ಲ. ಮಡಿಕೇರಿ ಸಮೀಪದ ಗಾಳಿ ಬೀಡಿನಿಂದ ಸುಬ್ರಹ್ಮಣ್ಯಕ್ಕೆ ಸಂಚರಿಸಲು ಗಾಡಿ ರಸ್ತೆಯಿದ್ದು ಇದನ್ನು ಸುಧಾರಿಸಿ ವಾಹನ ಸಂಚಾರ ಯೋಗ್ಯ ರಸ್ತೆ ಮಾಡಬೇಕೆಂದು ಜನಾಭಿಪ್ರಾಯವಿದೆ. ಅದೇ ರೀತಿ ಸೋಮವಾರಪೇಟೆ ತಾ॥ ಕುಮಾರಹಳ್ಳಿಯಿಂದ ಹೆಗ್ಗಡೆ ಮನೆ ಮೂಲಕ ಸುಬ್ರಹ್ಮಣ್ಯಕ್ಕೆ ಇರುವ ರಸ್ತೆಯನ್ನೂ ಸುಧಾರಿಸಲು ಅವಕಾಶವಿದೆ.

(ಸರ್ವಋತು ರಸ್ತೆಗಳು, ಅನುಕೂಲ ವಾತಾವರಣ ಮತ್ತು ಕಚ್ಚಾ ರಸ್ತೆಗಳಿಂದ ಸಂಪರ್ಕ ಪಡೆದಿರುವ ಹಳ್ಳಿಗಳ ಸಂಖ್ಯೆಯ ವಿವರವಾದ ಪಟ್ಟಿಯನ್ನು ಪು. 427ರಲ್ಲಿ ಕೊಡಲಾಗಿದೆ.)

## ಸಾರಿಗೆ ಗಣತಿ

ಲೋಕೋಪಯೋಗಿ ಇಲಾಖೆಯು ಪ್ರತೀ 5 ವರ್ಷಕ್ಕೊಮ್ಮೆ ಸಂಚಾರ ಗಣತಿ ಮತ್ತು ವಾಹನಗಳ ಸಮೀಕ್ಷೆಯನ್ನು 1959ನೇ ಸಾಲಿನಿಂದಲೂ ಕೈಗೊಳ್ಳುತ್ತಿವೆ. ಇದಲ್ಲದೆ ಪ್ರತೀ ವರ್ಷವು ಆಯ್ದ ರಸ್ತೆಗಳಲ್ಲಿ ಮಾದರಿ ಸಮೀಕ್ಷೆಯನ್ನು ನಡೆಸುತ್ತಿದೆ. ರಸ್ತೆಗಳಿಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಯನ್ನು ಸಂಗ್ರಹಿಸುವುದು ಈ ಗಣತಿ ಮತ್ತು ಸಮೀಕ್ಷೆಗಳ ಮೂಲ ಉದ್ದೇಶವಾಗಿದೆ. ಕೊಡಗಿನ ರಾಜ್ಯ ನಿಧಿಯ ರಸ್ತೆಗಳಲ್ಲಿ 1970–71 ರಿಂದ 1987-88ರ ವರೆಗೆ ಸರಾಸರಿ ಸಂಚಾರದ ಪ್ರಮಾಣ ದಿನದ 24 ಗಂಟೆಗಳ ಅವಧಿಯಲ್ಲಿ ಈ ಕೆಳಕಂಡಂತಿದೆ :

| ವರ್ಷ | ದೊಡ್ಡ ವಾಹನಗಳು | ಲಘು ವಾಹನಗಳು | ನಿಧಾನವಾಗಿ ಚಲಿಸುವ ವಾಹನಗಳು | ಒಟ್ಟು |
|---|---|---|---|---|
| 1970–71 | 63 | 137 | 22 | 222 |
| 1975–76 | 75 | 148 | 16 | 239 |
| 1981–82 | 62 | 168 | 9 | 239 |
| 1987–88 | 68 | 227 | 7 | 302 |

ಕೊಡಗು ಜಿಲ್ಲೆಯಲ್ಲಿ ಸರ್ವಋತು ರಸ್ತೆಗಳು, ಅನುಕೂಲ ವಾತಾವರಣದ ಮತ್ತು ಕಚ್ಚಾ ರಸ್ತೆಗಳಿಂದ ಸಂಪರ್ಕ ಪಡೆದಿರುವ ಹಳ್ಳಿಗಳ ಸಂಖ್ಯೆ 31-3-1990ರ ವರೆಗೆ

| ಕ್ರ.ಸಂಖ್ಯೆ | ತಾಲೂಕು | ಜನಸಂಖ್ಯೆ 1981 | | ಸಂಪರ್ಕ ಹೊಂದಿರುವ ಹಳ್ಳಿಗಳ ಸಂಖ್ಯೆ | | | | |
|---|---|---|---|---|---|---|---|---|
| | | | | ಸರ್ವಋತು ರಸ್ತೆ | ಅನುಕೂಲ ಋತುವಿನ ರಸ್ತೆ | ಕಚ್ಚಾ ರಸ್ತೆ | ಯಾವ ರಸ್ತೆ ಸಂಪರ್ಕವೂ ಇಲ್ಲದ್ದು | ಒಟ್ಟು |
| 1. | ಮಡಿಕೇರಿ | 0–499 | | — | — | — | — | — |
| | | 500–999 | | 13 | 2 | 5 | — | 20 |
| | | 1000–1499 | | 19 | 4 | 1 | — | 24 |
| | | 1500–ಮತ್ತು ಮೇಲೆ | | 21 | 2 | — | — | 23 |
| | | | ಒಟ್ಟು | 53 | 8 | 6 | — | 67 |
| 2. | ವೀರರಾಜಪೇಟೆ | 0–499 | | 3 | — | — | — | 3 |
| | | 500–999 | | 10 | 10 | 6 | — | 26 |
| | | 1000–1499 | | 9 | 7 | 8 | — | 24 |
| | | 1500–ಮತ್ತು ಮೇಲೆ | | 15 | 11 | 16 | — | 42 |
| | | | ಒಟ್ಟು | 37 | 28 | 30 | — | 95 |
| 3. | ಸೋಮವಾರಪೇಟೆ | 0–499 | | 14 | 7 | 14 | — | 35 |
| | | 500–999 | | 31 | 2 | 8 | — | 41 |
| | | 1000–1499 | | 17 | — | 2 | — | 19 |
| | | 1500–ಮತ್ತು ಮೇಲೆ | | 29 | — | 2 | — | 31 |
| | | | ಒಟ್ಟು | 91 | 9 | 26 | — | 126 |
| ಜಿಲ್ಲೆಯ ಒಟ್ಟು ಹಳ್ಳಿಗಳು | | 0–499 | | 17 | 7 | 14 | — | 38 |
| | | 500–999 | | 54 | 14 | 19 | — | 87 |
| | | 1000–1499 | | 45 | 11 | 11 | — | 67 |
| | | 1500–ಮತ್ತು ಮೇಲೆ | | 65 | 13 | 18 | — | 96 |
| | | | ಒಟ್ಟು | 181 | 45 | 62 | — | 288 |

ಕೊಡಗು ಜಿಲ್ಲೆಯಲ್ಲಿ ವಿವಿಧ ವರ್ಗದ ರಸ್ತೆಗಳಲ್ಲಿ 1970-71, 1975-76, 1981-82, ಮತ್ತು 1987-88ನೇ ಸಾಲಿನಲ್ಲಿ ಸಂಚಾರದಲ್ಲಿ ಕಂಡು ಬಂದ ಹೆಚ್ಚಳ ಈ ಕೆಳಕಂಡಂತಿದೆ.

| ವರ್ಷ | ಪ್ರತೀ ಗಣತಿ ಕೇಂದ್ರದಲ್ಲಿ ದಿನದ 24 ಗಂಟೆಗಳಲ್ಲಿ ಕಂಡು ಬಂದ ಸರಾಸರಿ ಸಂಚಾರ ದಟ್ಟಣೆ (ಮೆಟ್ರಿಕ್ ಟನ್‌ಗಳಲ್ಲಿ) | | | | |
|---|---|---|---|---|---|
| | ರಾಜ್ಯ ಹೆದ್ದಾರಿಗಳು | ಜಿಲ್ಲಾ ಮುಖ್ಯ ರಸ್ತೆಗಳು | ಇತರ ಜಿಲ್ಲಾ ರಸ್ತೆಗಳು | ಹಳ್ಳಿಯ ರಸ್ತೆಗಳು | ರಾಜ್ಯನಿಧಿಯ ಎಲ್ಲಾ ರಸ್ತೆಗಳು |
| 1970–71 | 1,606 | 731 | 457 | 173 | 768 |
| 1975–76 | 1,629 | 972 | 719 | 446 | 938 |
| 1981–82 | 2,462 | 912 | 918 | 368 | 818 |
| 1987–88 | 2,749 | 990 | — | 404 | 945 |

ಈ ಸಮೀಕ್ಷೆಗಳಲ್ಲಿ ಕಂಡು ಬಂದ ಅಂಶಗಳೇನೆಂದರೆ 1981-82 ನೇ ಸಾಲಿನಿಂದ 87-88ರ ವರೆಗೆ ಸಂಚಾರ ದಟ್ಟಣೆಯಲ್ಲಿ ಶೇ. 15.5 ರಷ್ಟು ಹೆಚ್ಚಳ ಹಾಗೂ ಇದೇ ಅವಧಿಯಲ್ಲಿ ವಾಹನ ಸಂಚಾರ ಪ್ರಮಾಣದಲ್ಲಿ ಶೇ. 26.4 ರಷ್ಟು ಏರಿಕೆಯಾಗಿರುವುದು ಕಾಣಿಸುತ್ತದೆ. ಇದಕ್ಕನುಗುಣವಾಗಿ ರಸ್ತೆಗಳ ಮೇಲ್ಮೈ ಮತ್ತು ಗುಣಮಟ್ಟವನ್ನು ಸುಧಾರಿಸುವ ಅಗತ್ಯವಿದೆ.

**ಸೇತುವೆಗಳು**

ಕೊಡಗಿನಲ್ಲಿ ನದಿಗಳನ್ನು ದಾಟಲು ಹಾಗೂ ಸಾಮಾನು ಸರಂಜಾಮುಗಳನ್ನು ಸಾಗಿಸಲು ಹಿಂದೆ ಜನರು ದೋಣಿಗಳನ್ನು ಉಪಯೋಗಿಸುತ್ತಿದ್ದರು. ಬ್ರಿಟಿಷರು ಕೊಡಗಿನಲ್ಲಿ ಆಡಳಿತ ಸ್ಥಾಪಿಸಿದ ನಂತರ ಸೇತುವೆಗಳು ಹಾಗೂ ರಸ್ತೆಗಳ ನಿರ್ಮಾಣಕ್ಕೆ ಗಮನ ಹರಿಸಿದರು. ಮೈಸೂರಿನಿಂದ ಮಡಿಕೇರಿಗೆ ಹೋಗುವ ರಸ್ತೆಯಲ್ಲಿ ಕಾವೇರಿ ನದಿಯನ್ನು ದಾಟಬೇಕಾದರೆ ಒಂದು ಸೇತುವೆಯ ನಿರ್ಮಾಣದ ಅವಶ್ಯಕತೆ ಇತ್ತು. ಕುಶಾಲನಗರದಲ್ಲಿ ಕಾವೇರಿಗೆ ಅಡ್ಡಲಾಗಿ 7 ಕಮಾನುಗಳ ಸೇತುವೆಯು 315 ಅಡಿ ಉದ್ದವಿದ್ದು 1848ರ ಮೇ 12ರಂದು ಸಂಚಾರಕ್ಕೆ ತೆರೆಯಲಾಯಿತು. ಇದೇ ಜಿಲ್ಲೆಯ ಅತಿ ದೊಡ್ಡ ಸೇತುವೆ. ನಂತರ ಕೆಲವು ಸೇತುವೆಗಳನ್ನು ಬ್ರಿಟಿಷರು ಕಟ್ಟಿದರು. ಅವುಗಳಲ್ಲಿ ಮುಖ್ಯವಾದುವು ಕುಶಾಲನಗರ–ಸೋಮವಾರಪೇಟೆ ರಸ್ತೆಯಲ್ಲಿ ಹಾರಂಗಿ ನದಿ ಮೇಲಿನ ಸೇತುವೆ, ಮಡಿಕೇರಿ–ವೀರರಾಜಪೇಟೆ ನಡುವೆ ಕಾವೇರಿಗೆ ಸಿದ್ದಾಪುರ ಬಳಿ ಸೇತುವೆ, ಸೋಮವಾರಪೇಟೆ ತಾಲೂಕಿನ ಹಟ್ಟಿ ಹೊಳೆಯ ಮೇಲೆ ಸೇತುವೆ, ಇದೇ ತಾಲೂಕಿನಲ್ಲಿ ಮಾದಾಪುರ ನದಿಯ ಸೇತುವೆ, ಹಾಗೂ ಮಡಿಕೇರಿ–ಮಂಗಳೂರು ರಸ್ತೆಯಲ್ಲಿ ಪಯಸ್ವಿನಿ ನದಿಯ ಮೇಲೆ ಸೇತುವೆ. ಪಂಚವಾರ್ಷಿಕ ಯೋಜನೆಗಳಲ್ಲಿ ಅನೇಕ ಕಿರು ಮತ್ತು ದೊಡ್ಡ ಸೇತುವೆಗಳನ್ನು ಕಟ್ಟಿ ಜಿಲ್ಲೆಯ ಹಾಗೂ ಹೊರಜಿಲ್ಲೆಗಳ ನಾನಾ ಭಾಗಗಳಿಗೆ ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಯನ್ನು ಏರ್ಪಡಿಸಲಾಗಿದೆ. (60ಕ್ಕಿಂತ ಹೆಚ್ಚು ಮೀಟರ್ ಜಲಮಾರ್ಗದ ಅಂತರವಿರುವ ದೊಡ್ಡ ಸೇತುವೆಗಳ ವಿವರವಾದ ಪಟ್ಟಿಯನ್ನು ಪು. 429ರಲ್ಲಿ ಕೊಟ್ಟಿದೆ.)

**ರಸ್ತೆ ಅಪಘಾತಗಳು**

ಜಿಲ್ಲೆಯ ರಸ್ತೆಗಳಲ್ಲಿ ವಾಹನಗಳ ಸಂಚಾರ ಮಾಡುತ್ತಿದ್ದು ಆಗಾಗ್ಗೆ ರಸ್ತೆ ಅಪಘಾತಗಳು ಸಂಭವಿಸುತ್ತಿವೆ. ಇಂತಹ ಅಪಘಾತಗಳು ಜನರ ತಪ್ಪಿನಿಂದಾಗಲಿ, ರಸ್ತೆಗಳ ದುಃಸ್ಥಿತಿಯಿಂದಾಗಲಿ ಅಥವಾ ಯಾಂತ್ರಿಕ ದೋಷಗಳಿಂದ ಉಂಟಾಗುತ್ತಿವೆ. ಅಪಘಾತಗಳ ಸಂಖ್ಯೆ, ಮೃತಪಟ್ಟವರ ಸಂಖ್ಯೆ ಮತ್ತು ಅಪಘಾತದ ಕಾರಣಗಳು 1971-72ನೇ ಸಾಲಿನಿಂದ 1981-82ನೇ ಸಾಲಿನವರೆಗಿನ ವಿವರವಾದಪಟ್ಟಿಯನ್ನು ಪುಟ 431ರಲ್ಲಿ ಕೊಟ್ಟಿದೆ.

ದಿನಾಂಕ 31-3-1990ರ ವರೆಗೆ, ಜಿಲ್ಲೆಯ ಎಲ್ಲಾ ರಸ್ತೆಗಳಲ್ಲಿ ನಿರ್ಮಾಣಗೊಂಡಿರುವ 60 ಕ್ಕಿಂತ ಹೆಚ್ಚು ಮೀಟರ್ ಜಲಮಾರ್ಗದ ಅಂತರವಿರುವ ದೊಡ್ಡ ಸೇತುವೆಗಳ ವಿವರಗಳು.

| ಸಂಖ್ಯೆ | ಸೇತುವೆಯನ್ನು ಕಟ್ಟಿರುವ ರಸ್ತೆಯ ಹೆಸರು | ನಿರ್ಮಾಣದ ವರ್ಷ | ನಿರ್ಮಾಣದ ವೆಚ್ಚ (ಲಕ್ಷಗಳಲ್ಲಿ) |
|---|---|---|---|
| 1. | ಕಾವೇರಿ ನದಿಯ ಮೇಲೆ ಸೇತುವೆ ಮಡಿಕೇರಿ ಮತ್ತು ಮಾಕುಟ್ಟ ಹಳ್ಳಿಗಳ ನಡುವೆ ವೀರರಾಜಪೇಟೆ. | 1885 | — |
| 2. | ಕಾವೇರಿ ನದಿಯ ಮೇಲೆ ಸೇತುವೆ ಮೈಸೂರು ಮತ್ತು ಬಂಟವಾಳಗಳ ನಡುವೆ (ಹುಣಸೂರು—ಪಿರಿಯಾಪಟ್ಟಣ—ಕುಶಾಲನಗರ—ಸುಂಟಿಕೊಪ್ಪ—ಮಡಿಕೇರಿ—ಸುಳ್ಯ—ಪುತ್ತೂರು) ಸೋಮವಾರಪೇಟೆ ತಾ॥. | 1940 ಕ್ಕಿಂತ ಪೂರ್ವ | — |
| 3. | ಹಟ್ಟಿಹೊಳೆ ಮೇಲೆ ಸೇತುವೆ, ಸಕಲೇಶಪುರ—ಸೋಮವಾರಪೇಟೆ—ಮಡಿಕೇರಿ—ವೀರರಾಜಪೇಟೆ ರಸ್ತೆ (ಸೋಮವಾರಪೇಟೆ ತಾ॥.) | 1940 ಕ್ಕಿಂತ ಪೂರ್ವ | — |
| 4. | ಕಾವೇರಿ ನದಿಯ ಮೇಲೆ ಸೇತುವೆ, ಮಡಿಕೇರಿ—ವೀರರಾಜಪೇಟೆ ನಡುವಣ ರಸ್ತೆ ವೀರರಾಜಪೇಟೆ ತಾ॥. | 1955 | 2.31 |
| 5. | ಮಾದಾಪುರ ರಸ್ತೆಯ ಮೇಲೆ ಮಾದಾಪುರ ನದಿಯ ಸೇತುವೆ, ಸಕಲೇಶಪುರ—ಸೋಮವಾರಪೇಟೆ—ಮಡಿಕೇರಿ—ವೀರರಾಜಪೇಟೆ ರಸ್ತೆ, ಸೋಮವಾರಪೇಟೆ ತಾ॥. | 1940 ಕ್ಕಿಂತ ಪೂರ್ವ | — |
| 6. | ಕಾವೇರಿ ನದಿಯ ಮೇಲೆ ಸೇತುವೆ, ಕೊಂಡನಗೆರೆ ಬಳಿ ಅಮ್ಮತ್ತಿ—ಮೂರ್ನಾಡ್ ರಸ್ತೆ ವೀರರಾಜಪೇಟೆ ತಾ॥. | 1969 | 6.83 |
| 7. | ಹಾರಂಗಿ ನದಿಯ ಮೇಲೆ ಸೇತುವೆ, ಜಂಬೂರು—ಸುಂಟಿಕೊಪ್ಪದ ರಸ್ತೆ ಸೋಮವಾರಪೇಟೆ ತಾ॥. | 1956 | 4.10 |
| 8. | ಹಾರಂಗಿ ನದಿಯ ಮೇಲೆ ಸೇತುವೆ ಕುಶಾಲನಗರ—ಸೋಮವಾರಪೇಟೆ ರಸ್ತೆ ಸೋಮವಾರಪೇಟೆ ತಾ॥. | 1940 ಕ್ಕಿಂತ ಪೂರ್ವ | — |

ದೊಡ್ಡ ಮತ್ತು ಸಣ್ಣ ಸೇತುವೆಗಳ ಅಂಕಿ ಅಂಶಗಳು–31-3-1990ರ ವರೆಗೆ (ರಾಜ್ಯ ರಸ್ತೆ ನಿಧಿಯು)

| ರಸ್ತೆಯ ವರ್ಗೀಕರಣ | ಜಲಮಾರ್ಗದ ನಡುವಿನ ಅಂತರ ಕಡಿಮೆ ಇರುವ ಸಣ್ಣ ಸೇತುವೆಗಳ ಸಂಖ್ಯೆ | | | | | | | ರಾಜ್ಯ ಹೆದ್ದಾರಿಗಳಲ್ಲಿ ದೊಡ್ಡ ಸೇತುವೆಗಳ ಸಂಖ್ಯೆ | |
|---|---|---|---|---|---|---|---|---|---|
| | 6 ಮೀಟರ್‌ಗಳ ವರೆಗಿನ ಕಲ್ವರ್ಟ್‌ಗಳು | 6 ರಿಂದ 12 ಮೀ. | 12 ರಿಂದ 18 ಮೀ. | 18 ರಿಂದ 12 ಮೀ. | 24 ರಿಂದ 30 ಮೀ. | 30 ರಿಂದ 60 ಮೀ. | ಒಟ್ಟು* | 60 ಮೀ.ಗೂ ಹೆಚ್ಚು | ಒಟ್ಟು** 2+8+9 |
| ಹಳ್ಳಿಯ ರಸ್ತೆಗಳಲ್ಲಿ | 841 | 34 | 10 | 8 | 6 | — | 58 | 2 | 901 |
| ಜಿಲ್ಲಾ ಪ್ರಮುಖ ರಸ್ತೆಗಳಲ್ಲಿ | 1,170 | 46 | 11 | 11 | 5 | 10 | 83 | 3 | 1,256 |
| ರಾಜ್ಯ ಹೆದ್ದಾರಿಗಳಲ್ಲಿ | 1,011 | 29 | 4 | 5 | 4 | 2 | 44 | 5 | 1,060 |
| ಒಟ್ಟು | 3,022 | 109 | 25 | 24 | 15 | 12 | 185 | 10 | 3,217 |

* ಕಲ್ವರ್ಟ್‌ಗಳನ್ನು ಹೊರತುಪಡಿಸಿ.

** ಕಲ್ವರ್ಟ್‌ಗಳನ್ನು ಸೇರಿಸಿ ಒಟ್ಟು ಕಲ್ವರ್ಟ್‌ಗಳನ್ನು ಹೊರತು ಪಡಿಸಿ ಇರುವ ಆರು ಮೀಟರ್‌ಗೂ ಉದ್ದದ ಒಟ್ಟು ಸೇತುವೆಗಳ (8 + 9) ಸಂಖ್ಯೆ 195.

| ಇಸವಿ | ಅಪಘಾತಗಳ ಸಂಖ್ಯೆ | ಮೃತಪಟ್ಟವರ ಸಂಖ್ಯೆ | ಕಾರಣಗಳು: ಜನರ ತಪ್ಪಿನಿಂದ | ಯಾಂತ್ರಿಕ ತೊಂದರೆಯಿಂದ | ರಸ್ತೆಗಳ ದುಸ್ಥಿತಿಯಿಂದ |
|---|---|---|---|---|---|
| 1971—72 | 115 | 21 | 97 | 28 | 5 |
| 1972—73 | 105 | 16 | 80 | 46 | 7 |
| 1973—74 | 123 | 18 | 64 | 14 | 4 |
| 1974—75 | 121 | 23 | 79 | 31 | 3 |
| 1975—76 | 129 | 23 | 89 | 12 | 5 |
| 1976—77 | 177 | 29 | 135 | 12 | 10 |
| 1977—78 | 179 | 23 | 131 | 58 | 17 |
| 1978—79 | 282 | 49 | 264 | 53 | — |
| 1979—80 | 198 | 39 | 81 | 21 | — |
| 1980—81 | 195 | 22 | 195 | 35 | — |
| 1981—82 | 314 | 24 | 296 | 41 | 8 |

ಕೊಡಗು ಜಿಲ್ಲೆಯಲ್ಲಿ 1983-84 ಹಾಗೂ 85ನೇ ಸಾಲುಗಳಲ್ಲಿ ಸಂಭವಿಸಿದ ಅಪಘಾತಗಳಲ್ಲಿ ಮೃತಪಟ್ಟವರ ಸಂಖ್ಯೆ ಅನುಕ್ರಮವಾಗಿ 19, 34 ಮತ್ತು 33 ಆಗಿತ್ತು. 1986 ಮತ್ತು 87ನೇ ಸಾಲಿನಲ್ಲಿ ಅನುಕ್ರಮವಾಗಿ 34 ಮತ್ತು 39 ಹಾಗೂ 1988 ಮತ್ತು 1989ನೇ ಸಾಲಿನಲ್ಲಿ ಗತಿಸಿದವರ ಸಂಖ್ಯೆ ಅನುಕ್ರಮವಾಗಿ 39 ಮತ್ತು 40 ಆಗಿದ್ದಿತು. ಈ ವರ್ಷಗಳಿಗೆ ಅಪಘಾತಗಳ ಕಾರಣಗಳನ್ನು ತಿಳಿಯಲಾಗಿಲ್ಲ.

(ಆಧಾರ : ಪೋಲೀಸ್ ಹಾಗೂ ಲೋಕೋಪಯೋಗಿ ಇಲಾಖೆ).

**ಸಾರ್ವಜನಿಕ ಸಂಚಾರ**

ರಾಜರು ಹಾಗೂ ರಾಜ ಮನೆತನದವರು ಸಂಚರಿಸುವ ಅಗಲ ಕಿರಿದಾದ ಮಾರ್ಗಗಳೇ ಆಗಿನ ಹೆದ್ದಾರಿಗಳು. ಇದು ಪ್ರಾಚೀನ ಕೊಡಗಿನ ಸ್ಥಿತಿ. ಮಡಿಕೇರಿಯಲ್ಲಿರುವ ರಾಜಾ ಸೀಟಿನಿಂದ ಬಲಭಾಗಕ್ಕೆ ಬೆಟ್ಟದಿಂದ ಇಳಿದು ತಾಳತ್‌ಮನೆಗೆ ಹೋಗುವ ಕಾಲುದಾರಿಯೇ ರಾಜರ ಕಾಲದ ಹೆದ್ದಾರಿಯಾಗಿತ್ತು. ಪ್ರಯಾಣ ಮಾಡಲು ಆನೆ, ಕುದುರೆ, ಪಲ್ಲಕ್ಕಿ ಅಥವಾ ಮೇನೆಗಳನ್ನು ಬಳಸಲಾಗುತ್ತಿತ್ತು. ಜನರು ಸಾಮಾನು, ಸರಂಜಾಮುಗಳನ್ನು ಕೊಂಡೊಯ್ಯಲು ಎತ್ತುಗಳನ್ನು ಉಪಯೋಗಿಸುತ್ತಿದ್ದರು. ಎತ್ತಿನ ಗಾಡಿಗಳ ಸಂಚಾರವು 19ನೇಯ ಶತಮಾನದ ಕೊನೆಯ ಭಾಗದಲ್ಲಿ ಪ್ರಾರಂಭವಾಯಿತು. ಮೈಸೂರು ಕಡೆಯಿಂದ ಸರಕನ್ನು ಹೊತ್ತ ಗಾಡಿಗಳು ಕೊಡಗಿನ ಮೂಲಕ ಹಾದು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೇರಳಕ್ಕೆ ಪಯಣಿಸುತ್ತಿದ್ದವು.

ಕೊಡಗಿನಲ್ಲಿ ಮೊದಲು ಬೈಸಿಕಲ್ ಪ್ರವೇಶಿಸಿದ್ದು 1896 ರಲ್ಲಿ. ಮೋಟಾರು ಕಾರಿನ ಬಳಕೆ 1903ರಲ್ಲಿ ಆರಂಭವಾಯಿತು. ಸಂಚಾರಕ್ಕೆ ಬಸ್‌ಗಳ ಬಳಕೆ 1915 ರಿಂದ ಮೊದಲಿಟ್ಟಿತ್ತು. 1920ರ ಸುಮಾರಿನಲ್ಲಿ ಅನೇಕ ಬ್ರಿಟಿಷರು ಮತ್ತು ಕೆಲವರು ದೇಶಿಯರು ಮೋಟಾರ್ ಕಾರುಗಳನ್ನು ಹೊಂದಿದ್ದರು. ಕೆಲವು ಶ್ರೀಮಂತರು ಟಾಂಗಾಗಾಡಿಗಳನ್ನು ಬಳಸುತ್ತಿದ್ದರು. 1920ರಲ್ಲಿ, ಜಿಲ್ಲೆಯಲ್ಲಿ ಸುಮಾರು ಆರು ಕಾರುಗಳು ಮತ್ತು ಎಂಟು ಬಸ್‌ಗಳು ಇದ್ದವು. 1930ರಲ್ಲಿ, 15 ಕಾರುಗಳು ಹಾಗೂ 18 ಬಸ್‌ಗಳು ಹಾಗೂ 1940ರಲ್ಲಿ 70 ಕಾರುಗಳು ಮತ್ತು 26 ಬಸ್ಸುಗಳು ಸಂಚರಿಸುತ್ತಿದ್ದವು. ಹಳೆಯ ಬಸ್ಸುಗಳಲ್ಲಿ ಪಾಪಾರಾಂ ಬಸ್ ಸರ್ವಿಸ್ ಎಂಬುದು ಭಾಗಮಂಡಲ—ಮಡಿಕೇರಿ-ಮೈಸೂರು ಮಾರ್ಗದಲ್ಲಿ, ಭಗಂಡೇಶ್ವರ ಮೋಟಾರ್ ಸರ್ವಿಸ್ ಭಾಗಮಂಡಲ-ಮಡಿಕೇರಿ ನಡುವೆ, ಇಗ್ಗುತ್ತಪ್ಪ ಮೋಟಾರ್ ಸರ್ವಿಸ್ ನಾಪೋಕ್ಲು-ಕಕ್ಕಬ್ಬೆ-ಮಡಿಕೇರಿ ನಡುವೆ ನಡೆಸಲಾಗುತ್ತಿತ್ತು. ಹಳೆಯ ಬಸ್‌ಗಳಲ್ಲಿ ಆದಿಕಾವೇರಿ ಬಸ್

ಸರ್ವಿಸ್, ಪಿ.ವಿ. ಮೋಟಾರ್ ಸರ್ವಿಸ್, ಸಿ.ಪಿ.ಸಿ., ಮತ್ತು ಕೂರ್ಗ್ ಟ್ರಾನ್ಸ್‌ಪೋರ್ಟ್ ಕಂಪನಿ ಬಸ್ಸುಗಳು ಸಹ ಜಿಲ್ಲೆಯಲ್ಲಿ ಸಂಚರಿಸುತ್ತಿದ್ದವು. ಈ ವಾಹನಗಳನ್ನು ಪೆಟ್ರೋಲಿನಿಂದ ನಡೆಸಲಾಗುತ್ತಿತ್ತು. ಯುದ್ಧ ಕಾಲದಲ್ಲಿ ಪೆಟ್ರೋಲ್ ಅಭಾವವಾದಾಗ ಇದ್ದಿಲನ್ನು ಬಳಸುವ ಹಬೆಯಂತ್ರಗಳ ವಾಹನಗಳಿದ್ದವು.

ಈ ಕೆಳಕಂಡ ಪಟ್ಟಿಯಲ್ಲಿರುವ ಅಂಕಿ ಅಂಶಗಳು 1953-54, 1954-55, 1955-56 ಮತ್ತು 1962-63ನೇ ಸಾಲುಗಳಲ್ಲಿ ನೋಂದಣಿಯಾದ ವಾಹನಗಳನ್ನು ತೋರಿಸುತ್ತದೆ.

| ಕ್ರ.ಸಂ. | ವಾಹನಗಳು | 1953-54 | 1954-55 | 1955-56 | 1962-63 |
|---|---|---|---|---|---|
| 1. | ಮೋಟಾರ್ ಸೈಕಲ್‌ಗಳು | 20 | 29 | 37 | 137 |
| 2. | ಖಾಸಗಿ ಕಾರುಗಳು ಜೀಪ್‌ಗಳನ್ನೊಳಗೊಂಡಂತೆ | 250 | 284 | 306 | (ಕಾರು) (ಜೀಪ್) 555 |
| 3. | ಟ್ಯಾಕ್ಸಿಗಳು | 18 | 19 | 26 | 50 |
| 4. | ಬಸ್ಸುಗಳು | 83 | 92 | 108 | 76 |
| 5. | ಲಾರಿಗಳು | 355 | 332 | 354 | 205 |
| 6. | ಟ್ರ್ಯಾಕ್ಟರ್‌ಗಳು | 40 | 51 | 54 | 80 |

1953-54 ರಿಂದ 1962-63ರ ಅವಧಿಯಲ್ಲಿ ಬಸ್ಸುಗಳು ಮತ್ತು ಲಾರಿಗಳನ್ನು ಹೊರತುಪಡಿಸಿ ಮಿಕ್ಕೆಲ್ಲಾ ನಮೂನೆಯ ವಾಹನಗಳ ಸಂಖ್ಯೆ ಗಮನಾರ್ಹವಾಗಿ ಹೆಚ್ಚಿರುವುದು ಕಂಡು ಬರುತ್ತದೆ.

ಉತ್ತಮವಾದ ರಸ್ತೆಗಳ ನಿರ್ಮಾಣದ ನಂತರ ಎತ್ತಿನ ಗಾಡಿಗಳ ಸಂಚಾರವು ಆರಂಭವಾಯಿತು. ರೈತರು ತಾವು ಬೆಳೆದ ಬೆಳೆಯನ್ನು ಸಾಗಿಸಲು ಎತ್ತಿನ ಗಾಡಿಗಳ ಉಪಯೋಗ ಪಡೆದರು. 1956ರಲ್ಲಿ ನಡೆಸಲಾದ ಒಂದು ಸಮೀಕ್ಷೆಯ ಪ್ರಕಾರ ಕೊಡಗಿನಲ್ಲಿ 1,006 ದೇಶಿಯ ಎತ್ತಿನ ಗಾಡಿಗಳಿದ್ದವು. (ಮಡಿಕೇರಿ ತಾಲೂಕು 52, ಸೋಮವಾರಪೇಟೆ ತಾಲೂಕು 759, ವೀರರಾಜಪೇಟೆ ತಾಲೂಕು 495). ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 1972ನೇ ಸಾಲಿನಲ್ಲಿದ್ದ ಎತ್ತಿನ ಗಾಡಿಗಳ ಸಂಖ್ಯೆ ಕ್ರಮವಾಗಿ 98 ಮತ್ತು 873. 1977ರಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿದ್ದ ಗಾಡಿಗಳ ಸಂಖ್ಯೆ 27 ಮತ್ತು 721. ಜಿಲ್ಲೆಯಲ್ಲಿ ಈಗ ಟಾಂಗಾ ಗಾಡಿಗಳನ್ನು ಉಪಯೋಗಿಸದೆ ಇರುವುದು ಒಂದು ಗಮನಿಸಬೇಕಾದ ಅಂಶ.

ಆಧುನಿಕ ಮೋಟಾರ್ ವಾಹನಗಳ ಸಂಖ್ಯೆ ಹೆಚ್ಚಾಗಿ 1939ರ ಮೋಟಾರ್ ವಾಹನಗಳ ಕಾಯ್ದೆಯನ್ನು ಜಾರಿಗೆ ತರಲು ಯಾವ ಪೂರ್ಣಾವಧಿ ಅಧಿಕಾರಿಯನ್ನು ನೇಮಕ ಮಾಡಿರಲಿಲ್ಲ. ಆದ್ದರಿಂದ ಈ ಕಾಯ್ದೆಯನ್ನು (ಕಾಯ್ದೆ IV, 1939) ಅನುಷ್ಠಾನಕ್ಕೆ ತರಲು ಅಂದಿನ ಚೀಫ್ ಕಮಿಷನರ್ ಪ್ರಾಂತೀಯ ಸಾರಿಗೆ ಪ್ರಾಧಿಕಾರ ಎಂಬ ಮಂಡಳಿಯನ್ನು ರಚಿಸಿದರು. ಇದರಲ್ಲಿ ನಾಲ್ಕು ಮಂದಿ ಸರ್ಕಾರದ ಸದಸ್ಯರು, ಪುರಸಭೆಗಳ ಇಬ್ಬರು ಅಧ್ಯಕ್ಷರು (ಮಡಿಕೇರಿ ಮತ್ತು ವೀರರಾಜಪೇಟೆ), ಮತ್ತು ಮೂರು ಮಂದಿ ಸರ್ಕಾರೇತರ ಸದಸ್ಯರಿದ್ದರು. ಕೊಡಗಿನ ಅಸಿಸ್ಟೆಂಟ್ ಕಮಿಷನರ್ ಅವರು ಈ ಮಂಡಳಿಯ ಅಧ್ಯಕ್ಷರಾಗಿದ್ದರು. ವಿಲೀನದ ನಂತರ ಮಂಡಳಿಯು ಬದಲಾಗಿ ಕರ್ನಾಟಕದ ಇತರೇ ಜಿಲ್ಲೆಗಳಲ್ಲಿರುವಂತೆ ಕೊಡಗಿನಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಕಛೇರಿಯು ಪ್ರಾರಂಭಿಸಲ್ಪಟ್ಟಿತು. ಈ ಪ್ರಾಧಿಕಾರಿಗಳು 1939ರ ಮೋಟಾರು ವಾಹನಗಳ ಕಾಯಿದೆಯ 44ನೇಯ ಪರಿಚ್ಛೇದದ ಪ್ರಕಾರ ಕಾರ್ಯ ನಡೆಸುತ್ತಿದ್ದು ಕೊಡಗಿನ ಜಿಲ್ಲಾಧಿಕಾರಿಗಳು ಈ ಪ್ರಾಧಿಕಾರದ ಸಭಾಪತಿಗಳು ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಕಾರ್ಯದರ್ಶಿಗಳಾಗಿ ಕೆಲಸ ನಿರ್ವಹಿಸುತ್ತಿದ್ದರು. ಜಿಲ್ಲಾ ಮಟ್ಟದಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳನ್ನು 1988ರ ಮೋಟಾರು ವಾಹನಗಳ ಕಾಯ್ದೆಯ ಸೆಕ್ಷನ್ 68ರ ಪ್ರಕಾರ ರಚಿಸಿದ್ದು ಇದು ಭಾಗಶಃ ನ್ಯಾಯಾಂಗಗಳಂತೆ ಕಾರ್ಯ ನಿರ್ವಹಣೆ ಮಾಡು

ತ್ತದೆ. ಅದರ ಅಧ್ಯಕ್ಷರು ಜಿಲ್ಲಾಧಿಕಾರಿಗಳು ; ಜಿಲ್ಲಾ ಪೋಲಿಸ್ ಅಧೀಕ್ಷಕರು ಇದರ ಸದಸ್ಯರಾಗಿರುತ್ತಾರೆ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಈ ಸಮಿತಿಯ ಪದನಿಮಿತ್ತ ಕಾರ್ಯದರ್ಶಿಗಳಾಗಿದ್ದಾರೆ. ಕರ್ನಾಟಕದ ಎಲ್ಲಾ ಕಡೆ ಸಂಚರಿಸಲು ಮತ್ತು ಜಿಲ್ಲೆಗಳ ನಡುವೆ ಸಂಚರಿಸಲು ಮೋಟಾರು ವಾಹನಗಳಿಗೆ ಅವರು ಪರವಾನಗಿ ಕೊಡುತ್ತಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾಯ್ದೆ ಮತ್ತು ನಿಯಮಾವಳಿಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಕೆಲಸ ಮೋಟಾರ್ ವಾಹನಗಳ ಇಲಾಖೆಯದು. ಈ ನಿಯಮಾವಳಿಗಳು ಈ ರೀತಿ ಇದೆ. 1. ಮೋಟಾರ್ ವಾಹನಗಳ ಅಧಿನಿಯಮ 1988. (1988ರ 59ನೇ ಕೇಂದ್ರ ಅಧಿನಿಯಮ) 2. 1957ರ ಕರ್ನಾಟಕ ಮೋಟಾರ್ ವಾಹನಗಳ ತೆರಿಗೆ ಅಧಿನಿಯಮ. 3. ಕೇಂದ್ರ ಸರ್ಕಾರದ ಮೋಟಾರ್ ವಾಹನಗಳ ನಿಯಮ, 1989. 4. ಕರ್ನಾಟಕ ಮೋಟಾರು ವಾಹನಗಳ ನಿಯಮ, 1989. 5. ಕರ್ನಾಟಕ ಮೋಟಾರು ವಾಹನಗಳ ನಿಯಮ, 1957. ಜಿಲ್ಲೆಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮೈಸೂರು ವಿಭಾಗದ ಸಾರಿಗೆ ಡೆಪ್ಯುಟಿ ಕಮಿಷನರ್‌ರವರ ಆಡಳಿತಕ್ಕೆ ಒಳಪಟ್ಟಿರುತ್ತಾರೆ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮತ್ತು ಸಹಾಯಕ ಸಾರಿಗೆ ಅಧಿಕಾರಿಗಳು ತಮ್ಮ ತಮ್ಮ ಪ್ರದೇಶಗಳ ವ್ಯಾಪ್ತಿಯಲ್ಲಿ ಚಾಲಕರಿಗೆ ಮತ್ತು ಕಂಡಕ್ಟರುಗಳಿಗೆ ಲೈಸನ್ಸ್ ಕೊಡುವ ಅಧಿಕಾರವನ್ನು ಪಡೆದಿದ್ದಾರೆ. ಅರ್ಜಿದಾರರ ಯೋಗ್ಯತೆಯನ್ನು ಪರಿಶೀಲಿಸಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವವರಿಗೆ ಲೈಸನ್ಸನ್ನು ಕೊಡಲಾಗುತ್ತದೆ. ಜಿಲ್ಲೆಯಲ್ಲಿ 1989–90ನೇ ಸಾಲಿನಲ್ಲಿ 1,127 ಚಾಲಕರ ಲೈಸನ್ಸ್‌ಗಳನ್ನು ಮತ್ತು 70 ಕಂಡಕ್ಟರ್ ಲೈಸನ್ಸ್‌ಗಳನ್ನು ಕೊಡಲಾಗಿದೆ.

ಹೊಸ ಯೋಜನೆಯ ಪ್ರಕಾರ ದ್ವಿಚಕ್ರ ಹಾಗು ಕಾರುಗಳ ಚಾಲಕರಿಗೆ ಲೈಸನ್ಸ್‌ಗಳನ್ನು ತಮ್ಮ ಜೇಬಿನಲ್ಲಿ ಕೊಂಡೊಯ್ಯಲು ಅನುವಾಗುವಂತೆ ಸಣ್ಣಗಾತ್ರದ ಪ್ಲಾಸ್ಟಿಕ್ ಕಾರ್ಡ್ ಲೈಸನ್ಸ್‌ಗಳನ್ನು ಕೊಡುವ ಕಾರ್ಯವನ್ನು ಮುಂದುವರಿಸಲಾಗಿದೆ. ಪ್ಲಾಸ್ಟಿಕ್ ಕಾರ್ಡ್‌ನಲ್ಲಿ ಚಾಲಕರ ಲೈಸನ್ಸ್ ಕೊಟ್ಟಿರುವ ವಿವರಗಳ ಪಟ್ಟಿ 1.4.1989 ರಿಂದ 31.3.1990ರ ವರೆಗೆ ಈ ಮುಂದೆ ಕೊಡಲಾಗಿದೆ :

ನೀಲಿ ಕಾರ್ಡ್ ದ್ವಿಚಕ್ರ ವಾಹನಗಳಿಗೆ–97, ಹಸಿರು ಕಾರ್ಡ್ ಲಘು ವಾಹನಗಳಿಗೆ–30, ಕೆಂಪು ಕಾರ್ಡ್ ಮೋಟಾರ್ ಸೈಕಲ್ ಹಾಗೂ ಲಘು ವಾಹನಗಳಿಗೆ–88.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಈಗ ಚಾಲಕರ ತರಬೇತಿ ಶಾಲೆಗಳ ಸ್ಥಾಪನೆಗೆ ಲೈಸನ್ಸ್ ಕೊಡುವ ಅಧಿಕಾರ ಹೊಂದಿದ್ದಾರೆ. ಅಮ್ಮತ್ತಿಯಲ್ಲಿ ಖಾಸಗಿಯಾದ ನ್ಯಾಷನಲ್ ಮೋಟಾರ್ ಡ್ರೈವಿಂಗ್ ಶಾಲೆಯನ್ನು ನಡೆಸಲಾಗುತ್ತಿದ್ದು ಇದರಲ್ಲಿ 1989-90ನೇ ಸಾಲಿನಲ್ಲಿ ಲಘು ಮೋಟಾರು ವಾಹನಗಳ ಚಾಲಕರ ತರಬೇತಿ ಪಡೆದ 44 ಮಂದಿ ಚಾಲಕರ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ದಿನಾಂಕ 31.3.1989ರ ವರೆಗೆ ಜಿಲ್ಲೆಯಲ್ಲಿ ಒಟ್ಟು 14,537 ವಾಹನಗಳು ನೋಂದಾಯಿಸಲ್ಪಟ್ಟು ಉಪಯೋಗದಲ್ಲಿದ್ದವು. ಈ ಸಂಖ್ಯೆ 31.3.1990ನೇ ಸಾಲಿನ ಅಂತ್ಯದ ವೇಳೆಗೆ 15,964 ವಾಹನಗಳಿಗೆ ಏರಿಕೆಯಾಗಿ ಹಿಂದಿಗಿಂತ ಶೇ. 9.87ರಷ್ಟು ಹೆಚ್ಚಳ ಕಂಡು ಬಂದಿದೆ. ಇದು ಕರ್ನಾಟಕ ರಾಜ್ಯದ ಒಟ್ಟು ಸಂಖ್ಯೆಯ ಶೇಕಡಾವಾರಿನಲ್ಲಿ ಜಿಲ್ಲೆಯ ಪಾಲು ಶೇ. 1.2ರಷ್ಟು. ನೋಂದಾಯಿಸಲ್ಪಟ್ಟ ಹಾಗೂ ಉಪಯೋಗದಲ್ಲಿರುವ ಎಲ್ಲಾ ಮೋಟಾರು ವಾಹನಗಳ ಮೇಲೆ ತೆರಿಗೆ ವಿಧಿಸುವವರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಹಾಗೂ ಸಹಾಯಕ ಪ್ರಾದೇಶಿಕ ಅಧಿಕಾರಿಗಳು. ಮೋಟಾರು ವಾಹನಗಳ ಮಾಲೀಕರು ತಮ್ಮ ವಾಹನಗಳ ತೆರಿಗೆ ಪಾವತಿ ಮಾಡಲು ಅನುಕೂಲವಾಗುವಂತೆ ಪ್ರಾದೇಶಿಕ ಮತ್ತು ಉಪ-ಪ್ರಾದೇಶಿಕ ಕಛೇರಿಗಳಲ್ಲಿ 1986-87ನೇ ಸಾಲಿನಿಂದಲೇ ಖಜಾನೆಗಳ ಸೌಲಭ್ಯವನ್ನು ಒದಗಿಸಲಾಗಿದೆ. ತೆರಿಗೆಯಿಂದ ಬರುವ ಆದಾಯದ ಸೋರಿಕೆಯನ್ನು ತಡೆಗಟ್ಟಲು ಮತ್ತು ಮೋಟಾರು ವಾಹನಗಳ ಕಾನೂನನ್ನು ಪರಿಣಾಮಕಾರಿಯಾಗಿ ಮಾಡಲು ವೀರರಾಜಪೇಟೆ-ತಲಚೇರಿ ರಸ್ತೆಯಲ್ಲಿ ಮಾಕುಟ್ಟದ ಬಳಿ ಒಂದು ಗಡಿ ತಪಾಸಣಾ ಕೇಂದ್ರವನ್ನು 1989-90ನೇ ಸಾಲಿನಲ್ಲಿ ಸ್ಥಾಪಿಸಲಾಗಿದೆ. ಸಾರಿಗೆ ಅದಾಲತ್‌ಗಳೆಂಬ ಪದ್ಧತಿಯನ್ನು ಜಿಲ್ಲೆಗಳಲ್ಲಿ ಪ್ರಾರಂಭಿಸಿದ್ದು ಸಾರ್ವಜನಿಕರ ದೂರುಗಳ ಮತ್ತು ತೊಂದರೆಗಳನ್ನು ತಿಳಿದುಕೊಳ್ಳಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪ್ರತೀತಿಂಗಳು 2-3 ದಿನಗಳನ್ನು ಮೀಸಲಿಡುತ್ತಾರೆ.

1989-90ನೇ ಸಾಲಿನಲ್ಲಿ ಹೊಸದಾಗಿ ನೊಂದಾಯಿಸಲ್ಪಟ್ಟ ಮೋಟಾರು ವಾಹನಗಳ ವಿವರ :- 1. ಸಾಗಾಣಿಕೆ ವಾಹನಗಳು : ಎ. ಮಧ್ಯಮ ತೂಕದ ಲಾರಿಗಳು ಮತ್ತು ಟ್ರಕ್‌ಗಳು 60 ; ಬಿ : ಎಲ್. ಜಿ. ವಿ.ಗಳು 4 ಚಕ್ರಗಳ ವಾಹನಗಳು 8 2. ಪ್ರಯಾಣಿಕರ ವಾಹನಗಳು ಎ. ಬಸ್ಸುಗಳು 3 ; ಬಿ. ಮಿನಿ ಬಸ್‌ಗಳು, ಇತರೇ ಪ್ರಯಾಣಿಕ ವಾಹನಗಳು 4 ; ಸಿ. ಟ್ಯಾಕ್ಸಿ 13 ; ಹಾಗೂ ಡಿ. ಮೂರು ಚಕ್ರಗಳ ಆಟೋರಿಕ್ಷಾಗಳು 26 ; 3. ಸಾಗಾಣಿಕೆ ಮಾಡದಿರುವ ವಾಹನಗಳು ; ಎ. ಮೋಪೆಡ್ 7 ; ಬಿ. ಸ್ಕೂಟರ್‌ಗಳು ಮತ್ತು ಮೋಟಾರು ಸೈಕಲ್ 515 ; ಸಿ. ಕಾರು 215 ; ಡಿ. ಜೀಪುಗಳು 200 ; ಇ. ಟ್ರಾಕ್ಟರ್ 84 ; ಎಫ್. ಟ್ರೈಲರ್‌ಗಳು 147 ; ಜಿ. ಇತರೆ 83 ; ಒಟ್ಟು : 1,365.

ಮೇಲಿನ ಪಟ್ಟಿಯಲ್ಲಿ ಕಂಡು ಬರುವ ಅಂಶವೇನೆಂದರೆ ದ್ವಿಚಕ್ರ ವಾಹನಗಳಾದ ಸ್ಕೂಟರ್ ಮತ್ತು ಮೋಟಾರ್ ಸೈಕಲ್‌ಗಳಿಗೆ ಹೆಚ್ಚಿನ ಜನಪ್ರಿಯತೆ ಇರುವುದು. ಕಾರು ಮತ್ತು ಜೀಪುಗಳಿಗೆ ಸಹ ಜಿಲ್ಲೆಯಲ್ಲಿ ಬೇಡಿಕೆ ಇದೆ.

ಕೊಡಗು ಜಿಲ್ಲೆಯ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ 31-1-91ರ ಅಂತ್ಯದ ವೇಳೆಗೆ ನೊಂದಾಯಿಸಲ್ಪಟ್ಟ ಒಟ್ಟು ವಾಹನಗಳ ವಿವರಗಳ ಪಟ್ಟಿ ಕೆಳಕಂಡಂತಿವೆ.

| ಸಂಖ್ಯೆ | ವಾಹನದ ನಮೂನೆ | ಒಟ್ಟು |
|---|---|---|
| 1. | ಮೋಟಾರ್ ಸೈಕಲ್‌ಗಳು | |
| ಎ) | 50 ಸಿ ಸಿ ಮತ್ತು ಕಡಿಮೆ | 295 |
| ಬಿ) | 51 ಸಿ ಸಿ ಯಿಂದ 300 ಸಿ ಸಿ ಯವರೆಗೆ | 5,068 |
| ಸಿ) | 301 ಸಿ ಸಿ ಮತ್ತು ಅಧಿಕ | 658 |
| 2. | ಮೋಟಾರ್ ಕಾರ್‌ಗಳು | 3,009 |
| 3. | ಅನುಪಯೋಗಿ ಕ್ಯಾರೇಜ್‌ಗಳು | 3 |
| 4. | ಜೀಪುಗಳು | 2,093 |
| 5. | ಆಟೋರಿಕ್ಷಾಗಳು | 453 |
| 6. | ಮೋಟಾರ್ ಕ್ಯಾಬ್‌ಗಳು | 355 |
| 7. | ಓಮ್ನಿ ಬಸ್‌ಗಳು | 54 |
| 8. | ಸ್ಟೇಷನ್ ವ್ಯಾಗನ್‌ಗಳು | 13 |
| 9. | ಸ್ಟೇಜ್ ಕ್ಯಾರಿಯರ್‌ಗಳು | |
| ಎ) | ಕೆ.ಎಸ್.ಆರ್.ಟಿ.ಸಿ. (ಕೊಡಗಿನಲ್ಲಿ ನೋಂದಣಿ ಇಲ್ಲ) | — |
| ಬಿ) | ಖಾಸಗಿ ಬಸ್ಸುಗಳು | 112 |
| 10. | ಸರಕು ಸಾಗಣೆ ವಾಹನಗಳು | 701 |

| ಸಂಖ್ಯೆ | ವಾಹನದ ನಮೂನೆ | ಒಟ್ಟು |
|---|---|---|
| 11. | ಟ್ರಾಕ್ಟರ್‌ಗಳು | 1,016 |
| 12. | ಟ್ರೈಲರ್‌ಗಳು | 1,968 |
| 13. | ಡಂಪರ್‌ಗಳು | — |
| 14. | ಬುಲ್‌ಡೋಜರ್‌ಗಳು | — |
| 15. | ರೋಡ್ ರೋಲರ್‌ಗಳು | — |
| 16. | ಟಿಪ್ಪರ್‌ಗಳು | 4 |
| 17. | ರ್‍ಯಾಕರ್ಸ್ | — |
| 18. | ಅಗ್ನಿ ಶಾಮಕ ಯಂತ್ರಗಳು | 2 |
| 19. | ಪವರ್ ಟಿಲ್ಲರ್‌ಗಳು | 917 |
| 20. | ಡೆಲಿವರಿ ವಾಹನಗಳು | 63 |
| 21. | ಆಂಬ್ಯುಲೆನ್ಸ್ ವಾಹನಗಳು | 5 |
| 22. | ಟ್ಯಾಂಕರ್‌ಗಳು | 17 |
| 23. | ಇತರೆ | — |
| | ಒಟ್ಟು ವಾಹನಗಳು | 16,806 |

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ

ಖಾಸಗಿ ಬಸ್ಸುಗಳು ಹಾಗೂ ರಸ್ತೆ ಸಾರಿಗೆ ನಿಗಮದ ಬಸ್ಸುಗಳು ಜಿಲ್ಲೆಯಲ್ಲಿ ಸಂಚರಿಸುತ್ತಿವೆ. ಮಡಿಕೇರಿ-ಕುಶಾಲ ನಗರಗಳ ನಡುವಿನ 32 ಕಿ.ಮೀ.ಗಳ ಉದ್ದದ ಮಾರ್ಗವನ್ನು 1-7-1968ರಂದು ರಾಷ್ಟ್ರೀಕರಣ ಮಾಡಲಾಯಿತು. ಇದಕ್ಕೆ ಸಂಬಂಧಿಸಿದಂತೆ ಮಡಿಕೇರಿಯಲ್ಲಿ ಒಂದು ಬಸ್ ಡಿಪೋವನ್ನು ಸ್ಥಾಪಿಸಿದ್ದು, ಇದು ಮಂಗಳೂರು ವಿಭಾಗದ ವ್ಯಾಪ್ತಿಗೆ ಸೇರಿರುತ್ತದೆ. ಒಟ್ಟು 58 ಮಾರ್ಗಗಳಲ್ಲಿ ಈ ಡಿಪೋಗೆ ಸೇರಿದ 75 ಬಸ್ಸುಗಳು ಸಂಚರಿಸುತ್ತಿದೆ. ಈ ಬಸ್ಸುಗಳಲ್ಲಿ ಪ್ರತೀದಿನ ಪ್ರಯಾಣ ಮಾಡುವ ಪ್ರಯಾಣಿಕರ ಸಂಖ್ಯೆ 31,750 ಆಗಿದೆ. 1989-90ನೇ ಸಾಲಿನ ಆರ್ಥಿಕ ವರ್ಷದಲ್ಲಿ ಒಂದು ಕಿ.ಮೀ.ಗೆ ಗಳಿಸಿದ ಆದಾಯ ರೂ. 5.01 ಆಗಿರುತ್ತದೆ. ಪ್ರತೀ ತಿಂಗಳಿಗೆ ಸರಾಸರಿ 9,84,250 ಮಂದಿ ಪ್ರಯಾಣಿಕರು ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣ

ಮಾಡಿರುತ್ತಾರೆ. ಮಡಿಕೇರಿ ಡಿಪೋ 58 ಮಾರ್ಗಗಳಲ್ಲಿ ಬಸ್ಸುಗಳನ್ನು ಓಡಿಸುತ್ತಿದ್ದು 6,646 ಕಿ.ಮೀಗಳನ್ನು ಕ್ರಮಿಸುತ್ತದೆ. ಇದು ಜಿಲ್ಲೆಯ ಹೊರಗಡೆಯ ಮಾರ್ಗಗಳ ದೂರವನ್ನು ಸಹ ಒಳಗೊಂಡಿದೆ. 1989-90ನೇ ಸಾಲಿನ ಆರ್ಥಿಕ ವರ್ಷದಲ್ಲಿ ಮಡಿಕೇರಿ ಡಿಪೋ ಸಾರಿಗೆ ಸಂಸ್ಥೆಗೆ 3,86,35,000 ರೂಪಾಯಿಗಳ ಹಾಸಲನ್ನು ಸಂಗ್ರಹಿಸಿ ಕೊಟ್ಟಿದೆ. ಬಸ್ಸುಗಳು ಅಂತರರಾಜ್ಯ ಮಾರ್ಗಗಳಾದ ಮಡಿಕೇರಿ-ಊಟಿ, ಮಡಿಕೇರಿ-ಕಾಸರಗೋಡು ನಡುವೆ ಸಂಚರಿಸುತ್ತವೆ. ಡಿಪೋಗೆ ಸೇರಿದ ನಾಲ್ಕು ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಒದಗಿಸಿರುವ ಸೌಲಭ್ಯಗಳು ಈ ರೀತಿ ಇದೆ: ಕುಡಿಯುವ ನೀರಿನ ವ್ಯವಸ್ಥೆ, ಸಂಬಂಧಿಸಿದ ನಿಲ್ದಾಣಗಳ ವೇಳಾಪಟ್ಟಿ, ಉಪಹಾರ ಗೃಹಗಳು, ಸಣ್ಣ ಅಂಗಡಿಗಳು, ಮತ್ತು ಪ್ರಯಾಣಿಕರ ವಸ್ತುಗಳನ್ನಿಡಲು ಸಾಮಾನು ಕೋಣೆಗಳು.

### ಕೊಡಗಿನ ರೈಲುಮಾರ್ಗದ ಯೋಜನೆಗಳು

1881-82ನೇ ಇಸವಿಯಲ್ಲೇ ಮಡಿಕೇರಿ-ಮೈಸೂರು ತಲಚೇರಿ ನಡುವೆ ರೈಲು ಸಂಪರ್ಕ ಕಲ್ಪಿಸುವ ವಿಚಾರವಲ್ಲಿ ಚರ್ಚೆ ಪ್ರಾರಂಭವಾಯಿತು. ಖಾಸಗಿ ಕಂಪನಿಯೊಂದು ಇದನ್ನು ನಿರ್ಮಾಣ ಮಾಡಲು ಸಜ್ಜಾಗಿತ್ತು. ಕೊಡಗಿನ ಆಗಿನ ಕಮೀಷನ್‌ರವರು ಮೈಸೂರು ಚೀಫ್ ಕಮೀಷನ್‌ರವರ ಕಾರ್ಯದರ್ಶಿಗೆ ದಿನಾಂಕ 17-3-1883ರಲ್ಲಿ ಬರೆದ ಪತ್ರದಲ್ಲಿ ಮೈಸೂರು-ಮಡಿಕೇರಿ (ತಲಚೇರಿಗಳ ನಡುವೆ ರೈಲು ಮಾರ್ಗ) ಸ್ಥಾಪನೆಗೆ ಸಲಹೆ ಮಾಡಿದ್ದರು. ಮೈಸೂರಿನಿಂದ ಮಡಿಕೇರಿಗೆ ಹೋಗುವ ಮಾರ್ಗವು ಎಡತೊರೆ (ಈಗಿನ ಕೃಷ್ಣರಾಜನಗರ)-ಬೆಟ್ಟದಪುರ-ಫ್ರೇಜರ್‌ಪೇಟೆ (ಕುಶಾಲನಗರ) ಮೂಲಕವಾಗಿ ವೀರರಾಜಪೇಟೆ-ಮಡಿಕೇರಿ ಅಥವಾ ಹೆಚ್ಚು ನೇರವಾಗಿ ಹುಣಸೂರು-ಸಾಗರಕಟ್ಟೆ-ಗೋಣಿಕೊಪ್ಪಲು-ವೀರರಾಜಪೇಟೆ ಮೂಲಕ ಹಾದು ಹೋಗುವ ಸಲಹೆ ಮಾಡಲಾಗಿತ್ತು. 1917-18 ರಿಂದ 1919-20ರ ತ್ರೈವಾರ್ಷಿಕ ಅವಧಿಯಲ್ಲಿ ಹಳೆಯ ಮೈಸೂರುಸಂಸ್ಥಾನದ ಆಡಳಿತವು ಹಮ್ಮಿಕೊಂಡ ರೈಲು ಮಾರ್ಗಗಳಲ್ಲಿ ಮೈಸೂರು-ಮಡಿಕೇರಿ ಮಾರ್ಗವಾಗಿ ಕೇರಳದ ತಲಚೇರಿಯವರೆಗೆ ಹೋಗುವ ಮಾರ್ಗವು ಪ್ರಧಾನವಾಗಿ ಪ್ರಸ್ತಾಪಿಸಲ್ಪಟ್ಟಿತು. ಕೊಡಗಿನ ಮಾಕುಟ್ಟದಿಂದ ತಲಚೇರಿಯವರೆಗೆ ರೈಲು ಸಂಚಾರ ಏರ್ಪಡಿಸುವ ಸಂಬಂಧದಲ್ಲಿ ಮೊದಲ ಹೆಜ್ಜೆಯಾಗಿ ಹಿಂದೆ ಪೂರ್ವಭಾವಿ ಸಮೀಕ್ಷೆಯನ್ನು ಸಹಾ ಮಾಡಲಾಗಿತ್ತು. ಕಾರಣಾಂತರಗಳಿಂದ ಪುನಃ ಈ ಯೋಜನೆ ನೆನೆಗುದಿಗೆ ಬಿದ್ದಿತು. ಹಲವು ದಶಕಗಳ ಹಿಂದೆ, ಸೇನೆಗೆ ಮರಮಟ್ಟು ಸಾಮಗ್ರಿಗಳನ್ನು ಸರಬರಾಜು ಮಾಡುವ ಸಲುವಾಗಿ 41.91 ಮೈಲು ಉದ್ದದ ಟ್ರಾಂವೇ ಮಾರ್ಗವನ್ನು ಹೊಸ ಪಟ್ಟಣ ಮತ್ತು ನಾಗರಹೊಳೆಗಳ ನಡುವೆ ನಿರ್ಮಿಸಲಾಗಿತ್ತು. (ಹೊಸಪಟ್ಟಣ-ದುಬಾರೆ-ದೇವಮಚ್ಚಿ-ತಿತಿಮತಿ-ಹೆಬ್ಬಾಳೆಹೊಳೆ-ನಾಗೇನಹಳ್ಳಿ) ಇದಕ್ಕೆ ತಗಲಿದ ಅಂದಾಜು ವೆಚ್ಚ 11.98 ಲಕ್ಷ ರೂಪಾಯಿಗಳು. ಮತ್ತೊಂದು ಟ್ರಾಂವೇ ಮಾರ್ಗವು ಕೊಡಗಿನ ಗಡಿಯಲ್ಲಿ ಮತ್ತು ಪೆರಿಯಂಬಾಡಿ ಘಾಟಿನ ಮಧ್ಯದಲ್ಲಿರುವ ಮಾಕುಟ್ಟದಿಂದ ಕಕ್ಕಿಪೊಳೆಯವರೆಗೆ ಹಾದು ಹೋಗುತ್ತಿತ್ತು. ಇದರ ಉದ್ದ 7 ಮೈಲಿಗಳು. ಈ ಮಾರ್ಗಗಳು ಬಳಕೆಯಲ್ಲಿ ಇಲ್ಲ. ಸ್ವಾತಂತ್ರ್ಯ ನಂತರ ಕೊಡಗಿನ ಗಣ್ಯ ವ್ಯಕ್ತಿಗಳು, ಸಂಘ ಸಂಸ್ಥೆಗಳು ಹಾಗೂ ಚುನಾಯಿತ ಪ್ರತಿನಿಧಿಗಳು ರೈಲು ಸಂಪರ್ಕಕ್ಕೆ ಸತತವಾಗಿ ಒತ್ತಾಯಿಸುತ್ತ ಬಂದಿದ್ದರು ಕೂಡಾ ಯಾವ ಪ್ರಗತಿಯು ಕಂಡು ಬಂದಿಲ್ಲ. ಮೈಸೂರು, ಕೊಡಗು ಮತ್ತು ಕೇರಳಗಳ ನಡುವೆ ರೈಲ್ವೆಯೋಜನೆಯು ಕಾರ್ಯಗತವಾದಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಸಹಾಯಕವಾಗಬಹುದು. ಆದರೆ ಇದರಿಂದ ಜಿಲ್ಲೆಗೆ ವಲಸೆ ಬರುವ ಜನರ ಸಂಖ್ಯೆ ಹೆಚ್ಚಿ ಸಾಮಾಜಿಕ ವೈಷಮ್ಯ ಹೆಚ್ಚಬಹುದೆಂದು ಇದನ್ನು ವಿರೋಧಿಸುವವರೂ ಇದ್ದಾರೆ. ಇಡೀ ಕರ್ನಾಟಕದಲ್ಲಿ ರೈಲು ಸಂಪರ್ಕ ಇಲ್ಲದೇ ಇರುವ ಒಂದೇ ಜಿಲ್ಲೆ ಕೊಡಗು ಮಾತ್ರ.

## ಅಂಚೆ ಮತ್ತು ತಂತಿ ಸೇವೆಗಳು

ಅಂಚೆ ಪದ್ಧತಿ ಬಳಕೆಗೆ ಬರುವ ಮುನ್ನ ಇದ್ದ ಒಂದು ಸಂಪರ್ಕ ಸಾಧನವೆಂದರೆ ಚರ್ಮ ವಾದ್ಯಗಳಿಂದ ಡಂಗೂರ ಹಾಕಿಸಿ ರಾಜರ ಆಜ್ಞೆ ಅಥವಾ ನಿರೂಪಗಳನ್ನು ಜನತೆಗೆ ತಿಳಿಸುತ್ತಿದ್ದುದು. ಕೊಡವರಲ್ಲಿ ಹಿಂದಿನಿಂದಲೂ ಆಚರಣೆಯಲ್ಲಿರುವ ವಿಶೇಷ ಸಂಗತಿಯೆಂದರೆ ಸಂಕೇತಗಳ ಮೂಲಕ ವಿಷಯ ತಿಳಿಸುವುದು. ಉದಾಹರಣೆಗೆ, ಗಂಡು ಸಂತತಿಯಾದಲ್ಲಿ ಒಂದು ಗುಂಡನ್ನು ಆಕಾಶಕ್ಕೆ ಹಾರಿಸಿ ವಿಷಯ ತಿಳಿಯಪಡಿಸುವುದು. ಯಾರಾದರೂ ಮೃತಪಟ್ಟರೆ ಎರಡು ಗುಂಡುಗಳನ್ನು ಹಾರಿಸುವುದು. ಕೊಡಗಿನ ರಾಜರ ಕಾಲದಲ್ಲಿ ಸ್ಥಳೀಯ ಅಂಚೆ ವ್ಯವಸ್ಥೆ ಜಾರಿಯಲ್ಲಿದ್ದ ಸಂಗತಿ ಕಂಡು ಬರುತ್ತದೆ. ಕೊಡಗಿನ ಸೀಮೆಯಲ್ಲಿ ಆಗಿನ ಕಂಪನಿ ಸರ್ಕಾರದ ಅಂಚೆಗಳನ್ನು ಸಾಗಿಸುವುದರಲ್ಲಿ ವಿಳಂಬವಾಗುತ್ತಿರುವ ಬಗ್ಗೆ ಬಂದ ದೂರಿನ ವಿಚಾರವಲ್ಲಿ ಲಿಂಗರಾಜ ಒಡೆಯರು ಸಂಬಂಧಿಸಿದ ಸ್ಥಳೀಯ ಅಧಿಕಾರಿಗಳಿಗೆ ಒಂದು ನಿರೂಪ ಕಳುಹಿಸಿ ಪರ ತಾಲೂಕಿನ ಜನ ಕಂಪನಿ ಸರ್ಕಾರದ ಅಂಚೆ ಊಳಿಗದ ಕಟ್ಟುಗಳನ್ನು ಅರಮನೆ (ಕೊಡಗು) ಸೀಮೆಯ ಅಂಚೆ ಜನರ ಕೈಯಲ್ಲಿ ಕೊಟ್ಟಲ್ಲಿ ಅವನ್ನು ವಿಳಂಬ ಮಾಡದೆ

ಸಾಗಿಸಲು ಹಾಗೂ ಅಂಚೆ ಜನಗಳಿಗೆ ಆಗಾಗ್ಗೆ ಸೂಕ್ತ ತಾಕೀತು ಮಾಡಿಕೊಂಡು ಬರಲು ತಿಳಿಸಿದ್ದನು. 1864ರಲ್ಲಿ ವೀರರಾಜಪೇಟೆಯಲ್ಲಿ ಸ್ಥಾಪಿಸಲಾದ ಅಂಚೆ ಕಛೇರಿ ಜಿಲ್ಲೆಯಲ್ಲೇ ಹಳೆಯದು. ನಂತರ ಅಂಚೆ ಕಛೇರಿಗಳು 1870 ರಲ್ಲಿ ಮಡಿಕೇರಿಯಲ್ಲೂ ಮತ್ತು 1871ರಲ್ಲಿ ಅಮ್ಮತ್ತಿಯಲ್ಲೂ ಸ್ಥಾಪಿಸಲ್ಪಟ್ಟವು. ಸ್ಥಳೀಯ ಅಂಚೆ ಓಲೆಕಾರರನ್ನು (ರನ್ನರ್) ನೇಮಕ ಮಾಡಿಕೊಂಡು ಎಲ್ಲಾ ತಾಲೂಕ್ ಕೇಂದ್ರಗಳಿಗೆ ಅಂಚೆ ತಲುಪಿಸಲು ವ್ಯವಸ್ಥೆ ಮಾಡಲಾಯಿತು.

ಸಂಪರ್ಕ ವ್ಯವಸ್ಥೆಯಲ್ಲಿ ಮಹತ್ತರ ಬೆಳವಣಿಗೆಯೆಂದರೆ 1894ರಲ್ಲಿ ವಿದೇಶೀ ಮತ್ತು ಹೊರ ಅಂಚೆಗಳನ್ನು ಮೈಸೂರಿನ ರೈಲ್ವೇ ನಿಲ್ದಾಣದಿಂದ ನೇರವಾಗಿ ಮಡಿಕೇರಿಗೆ ಕುದುರೆ ಬಂಡಿಗಳಲ್ಲಿ ಸಾಗಿಸಲು ಪ್ರಾರಂಭಿಸಿದ್ದು. ಬೆಂಗಳೂರಿನಿಂದ ಮೈಸೂರಿಗೆ ಅಂಚೆ ಚೀಲಗಳನ್ನು ಸಾಗಿಸುವ ಗುತ್ತಿಗೆಯನ್ನು ಯಶಸ್ವಿಯಾಗಿ ನಿರ್ವಹಿಸಿದ ಖಾಸಗಿ ವ್ಯಕ್ತಿ ಯಜಮಾನ ವೀರಸಂಗಪ್ಪನವರಿಗೆ ಮೈಸೂರಿನಿಂದ ಮಡಿಕೇರಿಗೆ ಅಂಚೆ ಚೀಲವನ್ನು ಸಾಗಿಸುವ ಗುತ್ತಿಗೆಯನ್ನು ಸಹ ನೀಡಲಾಯಿತೆಂದು ಹೇಳಲಾಗಿದೆ. ನಿಯತವಾದ ಅಂಚೆ ಸೇವೆ ಮಡಿಕೇರಿ ಮತ್ತು ವೀರರಾಜಪೇಟೆಯಲ್ಲಿ ನಡೆಯುತ್ತಿದ್ದ ಸಮಯದಲ್ಲಿ, ಸ್ಥಳೀಯ ಅಂಚೆಯೂ ಸಹ ಅಸ್ತಿತ್ವದಲ್ಲಿತ್ತು. ಇದು ಮುಖ್ಯವಾಗಿ ಜಿಲ್ಲೆಯ ಆಡಳಿತ ಹಾಗೂ ಇಲಾಖಾ ಮುಖ್ಯಸ್ಥರ ನಡುವಣ ಅಧಿಕೃತ ಸಂಪರ್ಕಕ್ಕೆ ಕೊಂಡಿಯಾಗಿತ್ತು. ಅಂಚೆ ವೆಚ್ಚದಿಂದ ಇದಕ್ಕೆ ವಿನಾಯಿತಿ ನೀಡಲಾಗಿತ್ತು. ಇದರಲ್ಲಿ ಸಾರ್ವಜನಿಕರ ಕಾಗದಗಳು ಮತ್ತು ಭಾಂಗಿ (ಪಾರ್ಸಲ್)ಗಳನ್ನು ಒಯ್ಯಲು ಸಹ ಅವಕಾಶವಿತ್ತು. 1869-70ರಲ್ಲಿ ಸ್ಥಳೀಯ ಅಂಚೆ ಮೂಲಕವಾಗಿ ರವಾನಿಸಲಾದ ಕಾಗದ ಪತ್ರಗಳ ಸಂಖ್ಯೆ 1,60,999. ಕ್ವೀನ್ಸ ಪೋಸ್ಟನ (ಮಡಿಕೇರಿ ಮತ್ತು ವೀರರಾಜಪೇಟೆ) ಎರಡು ಅಂಚೆ ಕಚೇರಿಗಳ ಮೂಲಕ ಮಡಿಕೇರಿ-ಮೈಸೂರು-ಕಣ್ಣಾನೂರು-ಮಂಗಳೂರಿನ ಮೂರು ಮಾರ್ಗಗಳಲ್ಲಿ ರವಾನಿಸಿದ ಪತ್ರಗಳ ಸಂಖ್ಯೆ 1,47,309. ಅಂಚೆ ಟಪಾಲು ಸರಿಯಾಗಿ ರವಾನೆಯಾಗುತ್ತಿದ್ದ ಐದು ಮಾರ್ಗಗಳ ಹೆಸರುಗಳು ಈ ರೀತಿಯಲ್ಲಿವೆ. 1. ಮಡಿಕೇರಿಯಿಂದ ಫ್ರೇಜರ್‌ಪೇಟೆ (ಕುಶಾಲನಗರ) (32 ಕಿ.ಮೀ.); 2. ಮಡಿಕೇರಿಯಿಂದ ಕಿಗ್ಗಟ್ಟುನಾಡ್ (56 ಕಿ.ಮೀ.); 3. ಮಡಿಕೇರಿಯಿಂದ ನಾಲ್ಕುನಾಡು (48 ಕಿ.ಮೀ.); 4. ಮಡಿಕೇರಿಯಿಂದ ಕೊಡ್ಲಿಪೇಟೆ (74 ಕಿ.ಮೀ.); 5. ಮಡಿಕೇರಿಯಿಂದ (ಮದ್ಯನಾಡ್) (8 ಕಿ.ಮೀ.). ಈ ಮಾರ್ಗಗಳನ್ನು ಬಿಟ್ಟು ಬೇರೆ ಕಡೆಯ ಅಂಚೆ ಸೇವೆಯ ಸಂಪರ್ಕಗಳು ಅಷ್ಟೊಂದು ಸುವ್ಯವಸ್ಥೆಯಿಂದ ನಡೆಯದೆ ಕೆಲವೊಮ್ಮೆ ಸಾರ್ವಜನಿಕ ವ್ಯವಹಾರಗಳಿಗೆ ತೀವ್ರ ಅಡಚಣೆಯುಂಟಾಗುತ್ತಿತ್ತು.

ಅನಂತರದ ವರ್ಷಗಳಲ್ಲಿ ಅಂಚೆ ಸೇವೆಯನ್ನು ವಿಸ್ತರಿಸಲಾಯಿತಲ್ಲದೆ ಇತರ ಕಡೆ ಇರುವಂತೆ ಅನೇಕ ಸೌಲಭ್ಯಗಳನ್ನು ಈ ಜಿಲ್ಲೆಯಲ್ಲಿ ಜಾರಿಗೆ ತರಲಾಯಿತು. 1877ರಲ್ಲಿ ವಿ.ಪಿ. ಪದ್ಧತಿಯನ್ನು ಜಾರಿಗೆ ತರಲಾಯಿತು. ಐವತ್ತು ರೂಪಾಯಿಗಳ ಮೊತ್ತಕ್ಕೆ ಎಂಟು ಆಣೆ (50 ಪೈಸೆ) ಇನ್‌ಷ್ಯೂರೆನ್ಸ್ ಶುಲ್ಕ ತೆರುವ ಪದ್ಧತಿಯನ್ನು 1878 ರಲ್ಲಿ ಚಾಲ್ತಿಗೆ ತರಲಾಯಿತು. ಇದೇ ವರ್ಷದಲ್ಲಿ ಸರ್ಟಿಫಿಕೇಟ್ ಆಫ್ ಪೋಸ್ಟಿಂಗನ್ನು ಆರಂಭಿಸಲಾಯಿತು. ರಿಜಿಸ್ಟ್ರೇಷನ್ ಶುಲ್ಕ ಎರಡು ಆಣೆಯಾಗಿತ್ತು. 1879 ರಲ್ಲಿ ಪೋಸ್ಟ್‌ಕಾರ್ಡ್‌ಗಳನ್ನು ಬಿಡುಗಡೆ ಮಾಡಲಾಯಿತು. ಮನಿಯಾರ್ಡರ್‌ಗಳ ಬಳಕೆಯನ್ನು 1880 ರಲ್ಲಿ ಹಾಗೂ ತಂತಿ ಮನಿಯಾರ್ಡರ್ ಬಳಕೆಯನ್ನು 1884 ರಲ್ಲಿ ಪ್ರಾರಂಭಿಸಲಾಯಿತು. ಅಂದಿನ ಮನಿಯಾರ್ಡರ್ ಕಮಿಷನ್ ದರ 25.00 ರೂಪಾಯಿಗಳಿಗೆ ಎರಡು ಆಣೆ ಆಗಿತ್ತು. ಉಳಿತಾಯ ಖಾತೆಯನ್ನು (ಸೇವಿಂಗ್ಸ್ ಬ್ಯಾಂಕ್) 1882 ರಲ್ಲಿ ಪ್ರಾರಂಭಿಸಲಾಯಿತು. ಇದೇ ಸಮಯದಲ್ಲಿ 16 ಅಂಚೆ ಕಛೇರಿಗಳಿದ್ದುವು. ಜಿಲ್ಲೆಯ ಅಂಚೆ ಇಲಾಖೆ ಮದ್ರಾಸಿನ ಪೋಸ್ಟ್‌ಮಾಸ್ಟರ್ ಜನರಲ್‌ರವರ ಆಡಳಿತಕ್ಕೆ ಒಳಪಟ್ಟು ಕೆಲಸ ಮಾಡುತ್ತಿತ್ತು. ಈ ಕಚೇರಿಗಳ ಸಂಖ್ಯೆ 1896 ರಲ್ಲಿ 22ಕ್ಕೆ ಏರಿತು.

1901ನೇ ಇಸವಿಯಲ್ಲಿ ಜಿಲ್ಲಾ ಅಂಚೆಯನ್ನು ಹೊಸದಾಗಿ ರಚಿಸಲಾದ ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ವರ್ಗಾಯಿಸಲಾಯಿತು ಪುನಃ 1906ರಲ್ಲಿ ಈ ಇಲಾಖೆಯನ್ನು ಸರ್ಕಾರಕ್ಕೆ ವರ್ಗಾಯಿಸಲಾಯಿತು. ಅಂಚೆ ಕಚೇರಿಗಳ ಸಂಖ್ಯೆ ಏರಿಕೆಯಾಗಿ 1904–5ರ ಹೊತ್ತಿಗೆ 27 ಆಗಿತ್ತು. ಈ ಸಮಯದಲ್ಲಿ ಅಂಚೆ ಟಪಾಲನ್ನು 262 ಮೈಲಿಗಳಷ್ಟು ದೂರ ಸಾಗಿಸಲಾಗುತ್ತಿತ್ತು. 1904–5ರಲ್ಲಿ ರವಾನಿಸಲಾದ ಒಟ್ಟು 4,20,000 ಟಪಾಲಿನಲ್ಲಿ 1,68,000 ಪೋಸ್ಟ್‌ಕಾರ್ಡ್‌ಗಳು, 68,000 ವೃತ್ತ ಪತ್ರಿಕೆಗಳು ಸೇರಿದ್ದವು. ಮನಿಆರ್ಡರ್ ಹಣದ ಮೊತ್ತ ಸುಮಾರು $3\frac{1}{2}$ ಲಕ್ಷದಷ್ಟು. ಸೇವಿಂಗ್ಸ್ ಬ್ಯಾಂಕ್‌ನಲ್ಲಿದ್ದ 56,000 ರೂಪಾಯಿಗಳ ಶೇವಣಿ ಮೊತ್ತದಲ್ಲಿ 55,000 ರೂಪಾಯಿಗಳನ್ನು ವಾಪಸ್ಸು ಪಡೆಯಲಾಯಿತು. ಏಳು ತಂತಿ ಕಚೇರಿಗಳಿದ್ದು ಇವುಗಳನ್ನು ದೊಡ್ಡ ಅಂಚೆ ಕಚೇರಿಗಳೊಂದಿಗೆ ಸೇರ್ಪಡೆ ಮಾಡಲಾಗಿತ್ತು.

1953ರಲ್ಲಿ ಅಂಚೆ ಮತ್ತು ತಂತಿಯ 8 ಸಂಯುಕ್ತ ಕಛೇರಿಗಳು ಜಿಲ್ಲೆಯಲ್ಲಿದ್ದವು. ಕರ್ನಾಟಕ ಅಂಚೆ ಮತ್ತು

ತಂತಿ ವೃತ್ತವು 1-4-1960ರಲ್ಲಿ ರಚನೆಯಾದ ನಂತರ ಮದ್ರಾಸ್ ವೃತ್ತದಲ್ಲಿದ್ದ ಕೊಡಗಿನ ಅಂಚೆ ಮತ್ತು ತಂತಿ ಇಲಾಖೆಯನ್ನು ಕರ್ನಾಟಕ ಅಂಚೆ ಮತ್ತು ತಂತಿ ವೃತ್ತಕ್ಕೆ ವರ್ಗಾಯಿಸಲಾಯಿತು. ಮೈಸೂರು ವಿಭಾಗದ ಅಧೀಕ್ಷಕರು )ಮೈಸೂರು ಕೇಂದ್ರ ಸ್ಥಳ) ಕೊಡಗು ಜಿಲ್ಲೆಯ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದರು. ಹೊಸ ಅಂಚೆ ಕಚೇರಿಗಳನ್ನು ಪ್ರಾರಂಭಿಸುವುದು ಹಾಗೂ ಅಂಚೆ ಸೌಲಭ್ಯ ಕಾರ್ಯ ವಿಸ್ತರಿಸುವ ಮುನ್ನ ಪೋಸ್ಟ್‌ಮಾಸ್ಟರ್ ಜನರಲ್‌ರ ಅಪ್ಪಣೆ ಪಡೆಯಬೇಕಿತ್ತು. ದಿನಾಂಕ 31-3-1964ರ ಅಂತ್ಯಕ್ಕೆ ಕೊಡಗು ಜಿಲ್ಲೆಯಲ್ಲಿ ಒಂದು ಮುಖ್ಯ ಅಂಚೆ ಕಚೇರಿ, 21 ಉಪ ಕಚೇರಿ ಹಾಗೂ 109 ಶಾಖಾ ಕಚೇರಿಗಳು ಕೆಲಸ ಮಾಡುತ್ತಿದ್ದವು. ತಂತಿ ಸೇವೆಗೆ ಸ್ವತಂತ್ರ ಕಚೇರಿ ಇರಲಿಲ್ಲ. ಅಂಚೆ ಮತ್ತು ತಂತಿಯ 13 ಸಂಯುಕ್ತ ಕಚೇರಿಗಳು ಜಿಲ್ಲೆಯಲ್ಲಿ ತಂತಿ ಸೌಲಭ್ಯವನ್ನು ಒದಗಿಸುತ್ತಿದ್ದವು.

ಕೊಡಗು ವಿಭಾಗದಲ್ಲಿ 1-4-1992ರಲ್ಲಿ ಇದ್ದಂತೆ ಅಂಚೆ ಕಚೇರಿಗಳ ಹೆಸರುಗಳ ಪಟ್ಟಿ ಇವುಗಳಲ್ಲಿ 29 ಉಪ ಅಂಚೆ ಕಚೇರಿಗಳೂ (ದಪ್ಪ ಅಕ್ಷರದಲ್ಲಿವೆ) ಅವುಗಳ ಅಧೀನ ಇರುವ 186 ಶಾಖಾಕಚೇರಿಗಳು (ದೂರವಾಣಿ ವಿನಿಮಯ ಕೇಂದ್ರಗಳಿರುವ ಸ್ಥಳಗಳಲ್ಲಿ ದೂ.ವಿ.ಕೆ. ಎಂದು ನಮೂದಿಸಲಾಗಿದೆ) ಈ ರೀತಿ ಇವೆ.

**ಅಮ್ಮತ್ತಿ (ದೂ.ವಿ.ಕೆ.)** : 1. ಬಿಳಗುಂದ 2. ಹೊಸೂರು 3. ಕಳತ್ಮಾಡು (ದೂ.ವಿ.ಕೆ.) 4. ಕಣ್ಣಂಗಾಲ 5. ಕಾರ್ಮಾಡು 6. ಕಾವಾಡಿ ಮತ್ತು 7. ವೊಂಟಿಯಂಗಡಿ.

**ಭಾಗಮಂಡಲ (ದೂ.ವಿ.ಕೆ.)** : 1. ಚೆಟ್ಟಿಮಾನಿ(ದೂ.ವಿ.ಕೆ.) 2. ಕರಿಕೆ (ದೂ.ವಿ.ಕೆ.) 3. ಕುಂಡಚೇರಿ ಮತ್ತು 4. ಸಣ್ಣ ಪುಲಿಕೋಟು.

**ಬಾಳೆಲೆ (ದೂ.ವಿ.ಕೆ.)** : 1. ಕೊಟ್ಟಗೇರಿ 2. ನಿಟ್ಟೂರು ಮತ್ತು 3. ದೇವನೂರು.

**ಬಿಟ್ಟಂಗೇರಿ (ದೂ.ವಿ.ಕೆ.) – ಚೇರಂಬಾಣೆ [ದೂ.ವಿ.ಕೆ.]**

**ಚೆಟ್ಟಳ್ಳಿ (ದೂ.ವಿ.ಕೆ.)** : 1. ಕೇಂದ್ರೀಯ ತೋಟಗಾರಿಕೆ ಸಂಶೋಧನಾ ಕೇಂದ್ರ (ದೂ.ವಿ.ಕೆ.) ಮತ್ತು 2. ಕಡಗದಾಳು ಮತ್ತು ಕುಡ್ಲೂರು – ಚೆಟ್ಟಳ್ಳಿ.

**ಚೆಯ್ಯಂಡಾಣೆ (ದೂ.ವಿ.ಕೆ.)** : 1. ಅರಪಟ್ಟು 2. ಕಡಂಗ (ದೂ.ವಿ.ಕೆ.) 3. ಕಕ್ಕಬ್ಬೆ (ದೂ.ವಿ.ಕೆ.) 4. ಕರಡ 5. ಪಾರಾಣೆ (ದೂ.ವಿ.ಕೆ.) ಮತ್ತು 6. ಯವಕಪಾಡಿ.

**ಗೋಣಿಕೊಪ್ಪಲು (ದೂ.ವಿ.ಕೆ.)** : 1. ಅರವತ್ತೊಕ್ಲು 2. ದೇವರಾಪುರ 3. ಕೈಕೇರಿ 4. ಮಾಯಮುಡಿ (ದೂ.ವಿ.ಕೆ.) 5. ಪೊನ್ನಪ್ಪ ಸಂತೆ ಮತ್ತು 6. ಧನಗಾಲ.

**ಹಾರಂಗಿ ಜಲಾಶಯ [ಪ್ರಾಜೆಕ್ಟ್] (ದೂ.ವಿ.ಕೆ.)**

**ಹುದಿಕೇರಿ (ದೂ.ವಿ.ಕೆ.)** : 1. ಬಾಡಗರಕೇರಿ 2. ಬಿರುನಾಣಿ (ದೂ.ವಿ.ಕೆ.) 3. ಹರಿಹರ 4. ಹೈಸೊಡ್ಲೂರು 5. ಪರಕಟಗೇರಿ 6. ಟಿ.ಶೆಟ್ಟಿಗೇರಿ ಮತ್ತು 7. ಪಶ್ಚಿಮ–ನೆಮ್ಮಾಲೆ.

**ಜೋಡುಬೆಟ್ಟ – ಪೊನ್ನಂಪೇಟೆ**

**ಕೊಡ್ಲಿಪೇಟೆ (ದೂ.ವಿ.ಕೆ.)** : 1. ಬೆಸ್ಸೂರು ಮತ್ತು 2. ನೀರುಗುಂದ.

**ಕೊಡಿಗೆ** : 1. ಹೆಬ್ಬಾಲೆ (ದೂ.ವಿ.ಕೆ.) 2. ಕಣಿವೆ 3. ಕೊಡುಮಂಗಳೂರು 4. ಮಾದಲಾಪುರ 5. ತೊರೆನೂರು ಮತ್ತು 6. ಶಿರಂಗಾಲ.

**ಕುಶಾಲನಗರ (ದೂ.ವಿ.ಕೆ.)** : 1. ಬಸವನಹಳ್ಳಿ 2. ತೊರೆನೂರು 3. ಗುಡ್ಡೆಹೊಸೂರು 4. ಮುಳ್ಳುಸೋಗೆ 5. ನಂಜರಾಯಪಟ್ಟಣ 6. ರಂಗಸಮುದ್ರ ಮತ್ತು 7. ವಾಲ್ನೂರು (ದೂ.ವಿ.ಕೆ.)

**ಕುಟ್ಟ (ದೂ.ವಿ.ಕೆ.)** : 1. ಮಂಚಳ್ಳಿ ಮತ್ತು 2. ನಾಗರಹೊಳೆ

**ಮಾದಾಪುರ (ದೂ.ವಿ.ಕೆ.)** : 1. ಐಗೂರು 2. ಬಿಳಿಗೇರಿ (ದೂ.ವಿ.ಕೆ.) 3. ಗರಗಂದೂರು 4. ಗರ್ವಾಲೆ (ದೂ.ವಿ.ಕೆ.) 5. ಜ್ಞಾನಗಂಗಾ 6. ಹಟ್ಟಿಹೊಳೆ 7. ಕಿರಗಂದೂರು 8. ಕುಂಬೂರು 9. ಮೂವತ್ತೊಕ್ಲು 10. ಶಿರಂಗಳ್ಳಿ ಮತ್ತು 11. ಸೂರ್ಲಬ್ಬಿ.

**ಮಡಿಕೇರಿ (ದೂ.ವಿ.ಕೆ.)** : 1. ಅರವತ್ತೊಕ್ಲು 2. ಅವಂದೂರು 3. ಬಿಳಗೇರಿ 4. ಬೊಯಿಕೇರಿ(ದೂ.ವಿ.ಕೆ.) 5. ಹೆರವನಾಡು 6. ಗಾಳಿಬೀಡು 7. ಕಾಲೂರು 8. ಕಾಡನಕೊಲ್ಲಿ 9. ಕಗ್ಗೋಡ್ಲು 10. ಕೆ. ನಿಡುಗಣೆ 11. ಕೊಟ್ಟೂರು 12. ಕೊಯ್ನಾಡು (ದೂ.ವಿ.ಕೆ.) 13. ಮದೆ 14. ಮಡಿಕೇರಿ ಕಾಲೇಜು 15. ಮುಕ್ಕಂದೂರು (ದೂ.ವಿ.ಕೆ.) ಮತ್ತು 16. ತಾಳತ್‌ಮನೆ

**ಮಡಿಕೇರಿ ಕೋಟೆ** : 1. ಮಹದೇವಪೇಟೆ

**ಮೂರ್ನಾಡು [ದೂ.ವಿ.ಕೆ.]** : 1. ಬಲಮುರಿ 2. ಬೇತ್ರಿ 3. ಹಾಕತ್ತೂರು (ದೂ.ವಿ.ಕೆ.) 4. ಹೊದ್ದೂರು 5. ಕೊಣಂಜಗೇರಿ 6. ಮರಗೋಡು (ದೂ.ವಿ.ಕೆ.) ಮತ್ತು 7. ಸೊಡ್ಲೂರು ಕಟ್ಟೆಮಾಡು.

ನಾಪೋಕ್ಲು [ದೂ.ವಿ.ಕೆ.] : 1. ಬಲ್ಲಮಾವಟಿ 2. ಹೊದವಾಡ 3. ಕೊಳಕೇರಿ 4. ನೆಲ್ಜಿ (ದೂ.ವಿ.ಕೆ.) 5. ಪಾಲೂರು ಮತ್ತು 6. ಎಮ್ಮೆ ಮಾಡು.

ಪೊಲ್ಲಿಬೆಟ್ಟ [ದೂ.ವಿ.ಕೆ.] : 1. ಅಟ್ಟೂರು 2. ಚೆನ್ನಯ್ಯನಕೋಟೆ (ದೂ.ವಿ.ಕೆ.) ಮತ್ತು 3. ಮೇಕೂರು ಹೊಸಕೇರಿ

ಪೊನ್ನಂಪೇಟೆ: 1. ಬಲ್ಯಮಂಡೂರು 2. ಬೇಗೂರು 3. ಚಿಕ್ಕಸೊಡ್ಲೂರು 4. ಚಿಕ್ಕಮಂಡೂರು 5. ಹಳ್ಳಿಗಟ್ಟು 6. ಕಾನೂರು (ದೂ.ವಿ.ಕೆ.) 7. ಕೋತೂರು 8. ಕೋಟೂರು 9. ಕುಂದ (ದೂ.ವಿ.ಕೆ.) 10. ಕಿರಗೂರು (ದೂ.ವಿ.ಕೆ.) ಮತ್ತು ನಡಿಕೇರಿ

ಶನಿವಾರಸಂತೆ (ದೂ.ವಿ.ಕೆ) : 1. ಆಲೂರು ಸಿದ್ದಾಪುರ (ದೂ.ವಿ.ಕೆ.) 2. ಅಂಕನಹಳ್ಳಿ. 3. ಬೆಂಬಳೂರು 4. ದುಂಡಳ್ಳಿ, 5. ಈಚಲಬೀಡು, 6. ಗೋಪಾಲಪುರ, 7. ಗೌಡಳ್ಳಿ (ದೂ.ವಿ.ಕೆ.), 8. ಹಾಂಡ್ಲಿ, 9. ಹೊಸೂರು–ಸೋಮವಾರಪೇಟೆ 10. ಕಳಲೆ 11. ಮಾಲಂಬಿ 12. ನಂದಿಗುಂಡ ಮತ್ತು 13. ನಿಡ್ತ.

ಸಿದ್ದಾಪುರ (ದೂ.ವಿ.ಕೆ.) : 1. ಅಭ್ಯತ್‌ಮಂಗಲ 2. ಅರೆಕಾಡು (ದೂ.ವಿ.ಕೆ.) 3. ಬಾಡಗ ಬಾಣಂಗಾಲ 4. ಇಂಗಿಲಗೆರೆ 5. ಗುಹ್ಯ 6. ಕರಡಿಗೋಡು 7. ಮಾಲ್ದಾರೆ (ದೂ.ವಿ.ಕೆ) ಮತ್ತು 8. ನೆಲ್ಲಿಹುದಕೇರಿ.

ಸೋಮವಾರಪೇಟೆ (ದೂ.ವಿ.ಕೆ.) : 1. ಅಬ್ಬೂರುಕಟ್ಟೆ 2. ಬಳಗುಂದ 3. ಬೇಲೂರು-ಸೋಮವಾರಪೇಟೆ 4. ಬೆಟ್ಟದಹಳ್ಳಿ 5. ಗಣಗೂರು 6. ಗೋಣಿಮರೂರು 7. ಹಾನಗಲ್ಲು 8. ಹನಕೋಡು 9. ಕುಂದಳ್ಳಿ 10. ಕುಮಾರಹಳ್ಳಿ 11. ಕುಸುಬೂರು 12. ಮಸಗೋಡು 13. ಶಾಂತಳ್ಳಿ (ದೂ.ವಿ.ಕೆ.) 14. ತಣ್ಣೀರುಹಳ್ಳ 15. ತಾಕೇರಿ ಮತ್ತು 16. ತೋಳೂರು ಶೆಟ್ಟಳ್ಳಿ (ದೂ.ವಿ.ಕೆ.).

ಶ್ರೀಮಂಗಲ (ದೂ.ವಿ.ಕೆ.) : 1. ಬಾಡಗ 2. ಕುರ್ಚಿ ಮತ್ತು 3. ನಾಲಕ್ಕೇರಿ (ದೂ.ವಿ.ಕೆ).

ಸುಂಟಿಕೊಪ್ಪ (ದೂ.ವಿ.ಕೆ.) : 1. ಆಂದಗೋವೆ 2. ಅತ್ತೂರು-ನಲ್ಲೂರು 3. ಹರ್ದೂರು 4. ಹೆರೂರು 5. ಹೊರೂರು 6. ಹೊಸಕೋಟೆ (ದೂ. ವಿ. ಕೆ.) 7. ಕಲ್ಲೂರು 8. ಕಾನ್‌ಬೈಲ್ 9. ಕೆ. ಬೈಚನಹಳ್ಳಿ 10. ಕೆದಕಲ್ 11. ಕೊಡಗರಹಳ್ಳಿ 12. ಮತ್ತಿಕಾಡು 13. ನಾತೂರು-ಶಿರಂಗಾಲ ಮತ್ತು 14. ಉಲುಗುಲಿ.

ತಿತಿಮತಿ (ದೂ.ವಿ.ಕೆ) : 1. ಬದ್ರಗೋಳ 2. ಮರೂರು ಮತ್ತು 3. ನೊಕ್ಯ

ವೀರರಾಜಪೇಟೆ (ದೂ.ವಿ.ಕೆ.) : 1. ಅರಮೇರಿ 2. ಅರ್ಜಿ 3. ಬೀಟೋಳಿ 4. ಬೆಳ್ಳುಮಾಡು 5. ಬಿಟ್ಟಂಗಾಲ 6. ಬೆಟ್ಟಿಯತ್‌ನಾಡು-ಶೆಟ್ಟಿಗೇರಿ (ದೂ.ವಿ.ಕೆ.) 7. ಚೆಂಬೆಬೆಳ್ಳೂರು 8. ಚಿಕ್ಕಪೇಟೆ 9. ದೇವಣಗೇರಿ 10. ಹಾತೂರು 11. ಹೆಗ್ಗಳ 12. ಐಮಂಗಲ 13. ಕದನೂರು 14. ಕಾಕೋಟುಪರಂಬು (ದೂ.ವಿ.ಕೆ) 15. ಕದನೂರು–ಬೋಯಿಕೇರಿ 16. ಕಣ್ಣಂಗಾಲ 17. ಕೆದಮಳ್ಳೂರು 18. ಕುಟ್ಟಂದಿ 19. ಮಾಕುಟ್ಟ 20. ವೈತಾಡಿ ಮತ್ತು 21. ನಾಲವತ್ತೊಕ್ಲು

ಇದಲ್ಲದೆ ಕೆಳಗಿನ ಸ್ಥಳಗಳಲ್ಲಿ ದೂರವಾಣಿ ಕೇಂದ್ರಗಳು ಮಾತ್ರ ಇವೆ : 1. ಬೈರಂಬಾಡ (ವೀ) 2. ಕಾಜೂರು (ಸೋ.) 3. ಕೋಣನಕಟ್ಟೆ 4. ಮದೆನಾಡು ಮತ್ತು ಪೆರಾಜೆ (ಮ).

## ದೂರವಾಣಿ

ಪ್ರಥಮವಾಗಿ ದೂರವಾಣಿ ಸಂಪರ್ಕವನ್ನು 1952ನೇ ಸಾಲಿನಲ್ಲಿ ಮೈಸೂರು ಮತ್ತು ಮಡಿಕೇರಿಗಳ ನಡುವೆ ಏರ್ಪಡಿಸಲಾಯಿತು. ಇದು ಜಿಲ್ಲೆಯ ಸಂಪರ್ಕ ಮಾಧ್ಯಮದಲ್ಲಿ ಒಂದು ಮೈಲಿಗಲ್ಲು. ದೂರವಾಣಿಗಳ ಬಳಕೆ ಮಡಿಕೇರಿ ಪಟ್ಟಣದಲ್ಲಿ ಪ್ರಾರಂಭವಾಗಿದ್ದು 22-1-1955ರಲ್ಲಿ, ವೀರರಾಜಪೇಟೆ ಮತ್ತು ಸೋಮವಾರಪೇಟೆಗಳಲ್ಲಿ ದೂರವಾಣಿಗಳ ಬಳಕೆ ಪ್ರಾರಂಭಿಸಿದ್ದು ಅನುಕ್ರಮವಾಗಿ 15.3.1958 ಮತ್ತು 25.4.1960ರಲ್ಲಿ.

ಕೊಡಗಿನಲ್ಲಿ 1955ರಲ್ಲಿ ಒಂದೇ ಒಂದು ದೂರವಾಣಿ ವಿನಿಮಯ ಕೇಂದ್ರವು ಕೆಲಸ ಮಾಡುತ್ತಿದ್ದು ಇದರ ಸಂಖ್ಯೆ 1958ರಲ್ಲಿ ಎರಡು ಮತ್ತು 1960ರಲ್ಲಿ ಮೂರಕ್ಕೆ ಏರಿತು. 31.3.1964ರ ಹೊತ್ತಿಗೆ ಮಡಿಕೇರಿ, ಸೋಮವಾರಪೇಟೆ, ವೀರರಾಜಪೇಟೆ, ಕುಶಾಲನಗರ ಹಾಗೂ ಗೋಣಿಕೊಪ್ಪಲು ಗಳಲ್ಲಿ ದೂರವಾಣಿ ವಿನಿಮಯ ಕೇಂದ್ರಗಳು ಕೆಲಸ ಮಾಡುತ್ತಿದ್ದವು. ಮಡಿಕೇರಿಯ 'ಮ್ಯಾನ್ಯುಯಲ್ ಎಕ್ಸ್‌ಚೇಂಜ್' (ಮಾನವ ಚಾಲಿತ ವಿನಿಮಯ ಕೇಂದ್ರ) 79 ಸಂಪರ್ಕಗಳನ್ನು

ಹೊಂದಿತ್ತು. ವೀರರಾಜಪೇಟೆಯು ಮತ್ತೊಂದು ಮಾನವ ಚಾಲಿತ ಎಕ್ಸ್‌ಚೇಂಜ್ 33 ಸಂಪರ್ಕಗಳನ್ನು ಹೊಂದಿತ್ತು. 21 ಸಂಪರ್ಕಗಳ ಸೋಮವಾರಪೇಟೆ ವಿನಿಮಯ ಕೇಂದ್ರವು ಸ್ವಯಂಚಾಲಿತ ವ್ಯವಸ್ಥೆಯದಾಗಿತ್ತು. ಪೊಲ್ಲಿಬೆಟ್ಟ ದಲ್ಲಿ ಕನ್ಸಾಲಿಡೇಟೆಡ್ ಕಾಫಿ ಎಸ್ಟೇಟ್ ಲಿಮಿಟೆಡ್‌ನ ಕೇಂದ್ರ ಕಚೇರಿಯ ಉಪಯೋಗಕ್ಕಾಗಿ ಒಂದು ಸಾರ್ವಜನಿಕ ಕರೆ ಕಚೇರಿಯನ್ನು ಸ್ಥಾಪಿಸಲಾಗಿತ್ತು. ಕಾಲಕ್ರಮೇಣ ದೂರವಾಣಿ ಸೌಲಭ್ಯದಲ್ಲಿ ಅಗಾಧ ಪ್ರಗತಿಯುಂಟಾಯಿತು. ಈಗ ಜಿಲ್ಲೆಯಲ್ಲಿ ಒಂಬತ್ತು ಚಂದಾದಾರ ಪ್ರಧಾನ ಮಾರ್ಗ ಡಯಲಿಂಗ್‌ಗಳು (ಎಸ್.ಟಿ.ಡಿ.) ಹಾಗೂ ಬಹುದೂರ ಸಂಪರ್ಕ ಡಯಲಿಂಗ್‌ಗಳು ಮಾರ್ಗಗಳು (ಎಸ್.ಟಿ.ಡಿ.) ಜಿಲ್ಲೆಯ ಒಂಭತ್ತು ಸ್ಥಳಗಳಿಗೆ ಸಂಪರ್ಕ ಕಲ್ಪಿಸಿವೆ.

ಚಂದಾದಾರರಿಗೆ ಒದಗಿಸಿರುವ ಇತರೇ ದೂರವಾಣಿ ಸೌಲಭ್ಯವೆಂದರೆ ಜಿಲ್ಲಾ ದೂರವಾಣಿ ಕಚೇರಿಯಲ್ಲಿ ಸ್ಥಾಪಿಸಲಾಗಿರುವ ಫ್ಯಾಕ್ಸ್ ಸೌಲಭ್ಯ. ಜಿಲ್ಲೆಗೆ ಒಂದು ಟೆಲೆಕ್ಸ್ ವಿನಿಮಯ ಕೇಂದ್ರವಿದ್ದು ಇದರ ಸಾಮರ್ಥ್ಯ 12 ಚಾನೆಲ್‌ಗಳು ಹಾಗೂ ಕೆಲಸ ಮಾಡುತ್ತಿರುವ ಸಂಪರ್ಕಗಳು ಒಟ್ಟು ಒಂಬತ್ತು.

ಮಡಿಕೇರಿ ತಾಲೂಕಿನ ಭೌಗೋಳಿಕ ವಿಸ್ತೀರ್ಣ 1,449 ಚ.ಕಿ.ಗಳಾಗಿದ್ದು ದಿನಾಂಕ 31.3.1992ರ ವೇಳೆಗೆ ಇದರ ಪ್ರತೀ 100 ಚ.ಕಿ.ಮೀ.ಗಳಿಗೆ 151.48 ದೂರವಾಣಿಗಳು ಬಳಕೆಯಲ್ಲಿದ್ದವು. ಅಲ್ಲದೆ ಸೋಮವಾರಪೇಟೆ ಮತ್ತು ವೀರರಾಜಪೇಟೆ ತಾಲೂಕುಗಳ ಭೌಗೋಳಿಕ ವಿಸ್ತೀರ್ಣ ಕ್ರಮವಾಗಿ 999 ಹಾಗೂ 1,646 ಚ.ಕಿಮೀ.ಗಳಾಗಿದ್ದು ದೂರವಾಣಿಗಳ ಬಳಕೆ ಇದರ ಪ್ರತಿ 100 ಚ.ಕಿ.ಗಳಿಗೆ 170.67 ಮತ್ತು 176.97 ಆಗಿದ್ದಿತು. ವೀರರಾಜಪೇಟೆ ತಾಲೂಕಿನಲ್ಲಿ ಅತಿ ಹೆಚ್ಚು ದೂರವಾಣಿಗಳಿದ್ದು 1991ರ ಜನಗಣತಿಯ ಪ್ರಕಾರ (ಜನಸಂಖ್ಯೆ ತಾತ್ಕಾಲಿಕ, 1,77,234) ಪ್ರತೀ ಸಾವಿರ ಮಂದಿಗೆ 16.43 ದೂರವಾಣಿಗಳಿದ್ದವು. ಮಡಿಕೇರಿ ತಾಲೂಕಿನಲ್ಲಿ (ಜನಸಂಖ್ಯೆ ತಾತ್ಕಾಲಿಕ 1,26,482) ಪ್ರತೀಸಾವಿರ ಮಂದಿಗೆ 17.35 ಹಾಗೂ ಸೋಮವಾರಪೇಟೆ ತಾಲೂಕಿನಲ್ಲಿ (ಜನಸಂಖ್ಯೆ ತಾತ್ಕಾಲಿಕ 1,81,513) ಪ್ರತೀ ಸಾವಿರ ಮಂದಿಗೆ 9.39 ದೂರವಾಣಿಗಳಿದ್ದವು.

ತಾಲೂಕುವಾರು ದೂರವಾಣಿಗಳ ಸಂಖ್ಯೆ :

| | 31-3-1991 | 31-3-1992 |
|---|---|---|
| 1. ಮಡಿಕೇರಿ | 2,067 | 2,195 |
| 2. ಸೋಮವಾರಪೇಟೆ | 1,521 | 1,705 |
| 3. ವೀರರಾಜಪೇಟೆ | 2.746 | 2,913 |
| ಒಟ್ಟು | 6,334 | 6,813 |

ವಿವಿಧ ಸ್ಥಳಗಳಲ್ಲಿ ಕೆಲಸ ಮಾಡುತ್ತಿರುವ ಎಲೆಕ್ಟ್ರೋಮೆಕ್ಯಾನಿಕಲ್ ವಿನಿಮಯ ಕೇಂದ್ರಗಳ ಬದಲಿಗೆ ಎಲೆಕ್ಟ್ರಾನಿಕ್ ವಿನಿಮಯ ಕೇಂದ್ರಗಳನ್ನು ಸ್ಥಾಪಿಸುವುದು, ಅದಲ್ಲದೆ ಆದಷ್ಟು ಹೆಚ್ಚಿನ ಸ್ಥಳಗಳಿಗೆ ಎಸ್.ಟಿ.ಡಿ. ಸೌಲಭ್ಯವನ್ನು ಒದಗಿಸುವುದು ದೂರವಾಣಿ ಇಲಾಖೆಯು ಜಿಲ್ಲೆಯಲ್ಲಿ ಕೈಗೊಳ್ಳಲು ಹಮ್ಮಿಕೊಂಡಿರುವ ಕಾರ್ಯಕ್ರಮಗಳಾಗಿವೆ.

ಅಂಚೆ ಕಚೇರಿಗಳು, ದೂರವಾಣಿ ವಿನಿಮಯ ಕೇಂದ್ರಗಳು, ದೂರವಾಣಿಗಳು ಮತ್ತು ತಂತಿ ಕಚೇರಿಗಳ ವಿವರವಾದ ಪಟ್ಟಿಯನ್ನು ಪುಟ 440ರಲ್ಲಿ ಕೊಟ್ಟಿದೆ.

ಅಂಚೆ ಇಲಾಖೆಯ ಕೊಡಗು ವಿಭಾಗವನ್ನು ದಿನಾಂಕ 28–5–1981ರಂದು ಮಡಿಕೇರಿಯಲ್ಲಿ ರಚಿಸಲಾಯಿತು. ಇದು ಜಿಲ್ಲೆಯ ಮೂರು ಕಂದಾಯದ ತಾಲೂಕುಗಳನ್ನೊಳಗೊಂಡಿತ್ತು. 1990-91ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಒಟ್ಟು 215 ಅಂಚೆ ಕಚೇರಿಗಳಿದ್ದವು. ಇವುಗಳಲ್ಲಿ 47 ಮಡಿಕೇರಿ ತಾಲೂಕಿನಲ್ಲಿ, 82 ಸೋಮವಾರಪೇಟೆ ತಾಲೂಕಿನಲ್ಲಿ ಹಾಗೂ 86 ಅಂಚೆ ಕಛೇರಿಗಳು ವೀರರಾಜಪೇಟೆ ತಾಲೂಕಿನಲ್ಲಿದ್ದವು. 1981ರ ಜನಗಣತಿಯ ಪ್ರಕಾರ ಮಡಿಕೇರಿ ತಾಲೂಕಿನಲ್ಲಿ ಸರಾಸರಿ 2,504 ಜನರಿಗೆ ಒಂದು ಅಂಚೆ ಕಚೇರಿಯು, ಸೋಮವಾರಪೇಟೆ ತಾಲೂಕಿನಲ್ಲಿ 1,997 ಜನರಿಗೆ ಒಂದು ಅಂಚೆ ಕಚೇರಿ ಮತ್ತು ವೀರರಾಜಪೇಟೆ ತಾಲೂಕಿನಲ್ಲಿ 2,096 ಜನರಿಗೆ ಒಂದರಂತೆ ಇದ್ದವು. ಮಡಿಕೇರಿ ತಾಲೂಕಿನಲ್ಲಿ ಪ್ರತೀ 00.82 ಚ.ಕಿ.ಮೀ.ಗಳಿಗೆ ಒಂದು ಅಂಚೆ ಕಚೇರಿ ಸೌಲಭ್ಯ, ಸೋಮವಾರಪೇಟೆ ತಾಲೂಕಿನಲ್ಲಿ 12.18 ಚ.ಕಿ.ಮೀ.ಗಳಿಗೆ ಒಂದು ಹಾಗೂ ವೀರರಾಜಪೇಟೆ ತಾಲೂಕಿನಲ್ಲಿ ಪ್ರತೀ 19.13 ಚ. ಕಿ.ಮೀ. ಒಂದರಂತೆ ಇದ್ದವು. ಜಿಲ್ಲೆಯಲ್ಲಿರುವ ಅಂಚೆ ಪೆಟ್ಟಿಗೆಗಳ ಒಟ್ಟು ಸಂಖ್ಯೆ 496 ಆಗಿತ್ತು.

ಅಂಚೆ ಕಚೇರಿಗಳು, ದೂರವಾಣಿ ವಿನಿಮಯ ಕೇಂದ್ರಗಳು, ದೂರವಾಣಿಗಳು ಮತ್ತು ತಂತಿ ಕಚೇರಿಗಳು 1979–80, 84–85, 86–87 ಹಾಗೂ 1990–91ರ ಸಾಲುಗಳಲ್ಲಿದ್ದಂತೆ.

| ತಾಲೂಕು | ಅಂಚೆ ಕಚೇರಿ | ದೂರವಾಣಿ ಕೇಂದ್ರ | ಬಳಕೆಯಲ್ಲಿರುವ ದೂರವಾಣಿಗಳು | ತಂತಿ ಕಚೇರಿ |
|---|---|---|---|---|
| | | 1979–80 | | |
| ಮಡಿಕೇರಿ | 41 | 6 | 629 | — |
| ಸೋಮವಾರಪೇಟೆ | 75 | 11 | 623 | — |
| ವೀರರಾಜಪೇಟೆ | 78 | 13 | 923 | — |
| ಒಟ್ಟು | 194 | 30 | 2,176 | — |
| | | 1984–85 | | |
| ಮಡಿಕೇರಿ | 43 | 12 | 1,157 | 31 |
| ಸೋಮವಾರಪೇಟೆ | 79 | 13 | 1,051 | 25 |
| ವೀರರಾಜಪೇಟೆ | 84 | 19 | 1,701 | 12 |
| ಒಟ್ಟು | 206 | 44 | 3,909 | 68 |
| | | 1986–87 | | |
| ಮಡಿಕೇರಿ | 44 | 14 | 1,390 | 31 |
| ಸೋಮವಾರಪೇಟೆ | 79 | 16 | 1,410 | 25 |
| ವೀರರಾಜಪೇಟೆ | 84 | 26 | 2,123 | 12 |
| ಒಟ್ಟು | 207 | 56 | 4,923 | 68 |
| | | 1990–91 | | |
| ಮಡಿಕೇರಿ | 47 | 21 | 2,067 | ಲಭ್ಯವಿಲ್ಲ |
| ಸೋಮವಾರಪೇಟೆ | 82 | 18 | 1,521 | ” |
| ವೀರರಾಜಪೇಟೆ | 86 | 23 | 2,746 | ” |
| ಒಟ್ಟು | 215 | 62 | 6,334 | ” |

ಮಡಿಕೇರಿಯ ಪ್ರಧಾನ ಅಂಚೆ ಕಚೇರಿಯಲ್ಲಿ, ಅಂಚೆ ಚೀಟಿಗಳ ಸಂಗ್ರಹಣೆಯ ಜಾಗವನ್ನು ತೆರೆಯಲಾಗಿದೆ (ಫಿಲಾಟೆಲಿಕ್ಸ್ ಕೌಂಟರ್). ಮಡಿಕೇರಿಯ ಪ್ರಧಾನ ಅಂಚೆ ಕಚೇರಿ ಮತ್ತು ನಾಗರಹೊಳೆ ಅಂಚೆ ಕಚೇರಿಗಳಲ್ಲಿ ಸ್ಥಾಯಿಯಾಗಿ ಸಚಿತ್ರ ವಿಶೇಷ ಮುದ್ರೆ ವ್ಯವಸ್ಥೆ (ಪಿಕ್ಟೋರಿಯಲ್ ಕ್ಯಾನ್ಸಲೇಷನ್) ಯನ್ನು ಒದಗಿಸಲಾಗಿದೆ. ಈಗಾಗಲೇ 70 ಅಂಚೆ ಕಚೇರಿಗಳಲ್ಲಿ ಸಾರ್ವಜನಿಕ ದೂರವಾಣಿ ಕರೆ ಸೌಲಭ್ಯ ಏರ್ಪಡಿಸಲಾಗಿದೆ. ಇನ್ನೂ ಆರು ಅಂಚೆ ಕಚೇರಿಯ ಶಾಖೆಗಳಿಗೆ ಈ ಸೌಲಭ್ಯವನ್ನು ವಿಸ್ತರಿಸುವ ಯೋಜನೆಯಿದೆ. ತರಾಲು ಮತ್ತು ಚುರಿಕಾಡು ಎಂಬ ಸ್ಥಳಗಳಲ್ಲಿ ಅಂಚೆ ಕಚೇರಿಯ ಶಾಖೆಗಳನ್ನು ತೆರೆಯಲು ಉದ್ದೇಶಿಸಲಾಗಿದೆ.

ಕೊಡಗು ಫಿಲಾಟೆಲಿಕ್ಸ್ ಎಂಬ ಹವ್ಯಾಸಿ ಸಂಸ್ಥೆಯು 1979ರಲ್ಲಿ ಮಡಿಕೇರಿಯಲ್ಲಿ ಸ್ಥಾಪಿಸಲ್ಪಟ್ಟು ಉತ್ಸಾಹೀ ಹವ್ಯಾಸಿಗಳಿಗೆ ಅಂಚೆ ಚೀಟಿ ಸಂಗ್ರಹಿಸಲು ಅನುಕೂಲ ಕಲ್ಪಿಸಿದೆ. ಇದರ ಪ್ರಯತ್ನದಿಂದ ಮಡಿಕೇರಿ ಪ್ರಧಾನ ಅಂಚೆ ಕಚೇರಿಯಲ್ಲಿ (ಫಿಲಾಟೆಲಿಕ್ಸ್ ಕೌಂಟರ್) ಅಂಚೆ ಚೀಟಿಗಳ ಸಂಗ್ರಾಹಕರಿಗೆ ಮಾರಾಟದ ವಿಭಾಗವನ್ನು ತೆರೆಯಲಾಯಿತು ಮತ್ತು ಇದೇ ಕಚೇರಿಯಲ್ಲಿ ಸ್ಥಾಯಿಯಾಗಿ ಸಚಿತ್ರ ವಿಶೇಷ ಮುದ್ರೆ ವ್ಯವಸ್ಥೆಯನ್ನು ಏರ್ಪಾಟು ಮಾಡಲಾಗಿದೆ. ಜಿಲ್ಲೆ ಮತ್ತು ಬೇರೆ ಬೇರೆ ಕಡೆಗಳಲ್ಲಿ ಅಂಚೆ ಚೀಟಿಗಳ ಪ್ರದರ್ಶನ ಏರ್ಪಡಿಸಿದೆ. ಕೆಲವು ಆಸಕ್ತ ವಿದ್ಯಾರ್ಥಿಗಳು ಹಾಗೂ ಜನರಿಗೆ ಅಂಚೆ ಚೀಟಿ ಸಂಗ್ರಹಿಸುವಲ್ಲಿ ಮಾರ್ಗದರ್ಶನ ನೀಡಿದೆ.

### ತಂತಿಸೇವೆ

ಮಡಿಕೇರಿಯು 1869–70ರ ವೇಳೆಯಲ್ಲಿ ಕಲ್ಲಿಕೋಟೆಯ ಕರಾವಳಿ ವಿಭಾಗದ ಸರ್ಕಾರದ ತಂತಿ ಇಲಾಖೆಯ ಮುಖ್ಯ ಕೇಂದ್ರವಾಗಿತ್ತು. ಮೈಸೂರು ಜಿಲ್ಲೆಯಿಂದ ತಂತಿ ಮಾರ್ಗವು ಮಡಿಕೇರಿಯ ಮೂಲಕ ಹಾದು ಕೇರಳದ ಕಣ್ಣಾನೂರಿಗೆ ಹೋಗುತ್ತಿತ್ತು. 1865ರಲ್ಲಿ ಪಶ್ಚಿಮ ತೀರದ ಮಂಗಳೂರಿಗೆ ತಂತಿ ಉಪ ಮಾರ್ಗವನ್ನು ಪೂರ್ಣಗೊಳಿಸಲಾಯಿತು. ಹೀಗಾಗಿ ಬೆಂಗಳೂರು ಮತ್ತು ಕಣ್ಣಾನೂರು ಹಾಗೂ ಮಂಗಳೂರು ತಂತಿ ಮಾರ್ಗಗಳು ಮಡಿಕೇರಿಯಲ್ಲಿ ಸೇರಿದ್ದವು. ಇದೇ ಸುಮಾರಿನಲ್ಲಿ ಮಡಿಕೇರಿಗೆ ತಂತಿ ಸಂಪರ್ಕ ಕಲ್ಪಿಸಿ ಹೊರಗಡೆ ಪ್ರದೇಶಗಳ ತಂತಿ ಜಾಲಕ್ಕೆ ಸೇರಿಸಲಾಯಿತು. ತಂತಿ ಸೇವೆಯು ಪ್ರಾರಂಭದಿಂದ ವಿದೇಶಗಳೊಡನೆ ವ್ಯವಹರಿಸುತ್ತಿದ್ದ ಪ್ಲಾಂಟರುಗಳಿಗೆ ತುಂಬಾ ಅನುಕೂಲವಾಯಿತು. 1869-70ನೇ ಸಾಲಿನಲ್ಲಿ 1,595 ವರ್ತಮಾನಗಳನ್ನು ಪಡೆಯಲಾಯಿತು ಮತ್ತು ರವಾನಿಸಲಾಯಿತು. ಇದರಿಂದ ಬಂದ ಒಟ್ಟು ಆದಾಯ ರೂ. 1,798.50 ಕೊಡಗಿನಲ್ಲಿದ್ದ ಅಂಚೆ ಮತ್ತು ತಂತಿ ಸೇವೆಯನ್ನು 1.4.1960ರಲ್ಲಿ ಕರ್ನಾಟಕದ ಅಂಚೆ ಮತ್ತು ತಂತಿ ಸೇವೆಯ ಆಡಳಿತಕ್ಕೆ ಸೇರಿಸಲಾಯಿತು.

### ಆಕಾಶವಾಣಿ ಕೇಂದ್ರ

ಮಡಿಕೇರಿಯಲ್ಲಿ ಆಕಾಶವಾಣಿ ಕೇಂದ್ರವನ್ನು ಸ್ಥಾಪಿಸುವ ಸಲುವಾಗಿ ಕಟ್ಟಡದ ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿದ್ದು 1991ರ ಅಂತ್ಯದ ವೇಳೆಗೆ ಪ್ರಸಾರ ಕೇಂದ್ರ ಆರಂಭವಾಗುವ ನಿರೀಕ್ಷೆಯಿದೆಯೆಂದು ತಿಳಿಸಲಾಗಿತ್ತು. ಇದರಿಂದ ಮಡಿಕೇರಿ ಸುತ್ತಮುತ್ತಲಿನ ಸುಮಾರು 100 ಕಿ.ಮೀ.ಗಳ ವ್ಯಾಪ್ತಿಯಲ್ಲಿನ ಪ್ರದೇಶಗಳ ಜನರಿಗೆ ಪ್ರಯೋಜನವಾಗುತ್ತದೆ. ಪ್ರತಿನಿತ್ಯ ಒಂದು ಅಥವಾ ಎರಡು ಗಂಟೆಗಳ ಕಾಲ ಸ್ಥಳೀಯವಾಗಿ ರೂಪಿಸಿದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದರಿಂದ ಕೊಡಗಿನ ಸಾಂಸ್ಕೃತಿಕ ರಂಗಕ್ಕೆ ವಿಶೇಷ ಪ್ರೋತ್ಸಾಹ ದೊರಕಲಿದೆ. ಜನರು ಕಾರ್ಯಕ್ರಮಗಳನ್ನು ಸ್ಪಷ್ಟವಾಗಿ ಕೇಳುವುದಕ್ಕೋಸ್ಕರ ಎಫ್.ಎಮ್. ತಂತ್ರಜ್ಞಾನವನ್ನು ಉಪಯೋಗಿಸಲಾಗುತ್ತದೆ. ಕಡಿಮೆ ಶಕ್ತಿಯ ದೂರದರ್ಶನದ ರಿಲೇ ಕೇಂದ್ರವನ್ನು ಮಡಿಕೇರಿಯಲ್ಲಿ ಸ್ಥಾಪಿಸಲಾಗಿದೆ. ದೆಹಲಿ ಮತ್ತು ಬೆಂಗಳೂರು ಕೇಂದ್ರಗಳ ಕಾರ್ಯಕ್ರಮಗಳನ್ನು ಇದರ ಮೂಲಕ ಪುನಃ ಪ್ರಸಾರ ಮಾಡಲಾಗುತ್ತಿದೆ. ಸುಮಾರು 25 ಕಿಲೋಮೀಟರ್‌ಗಳ ವ್ಯಾಪ್ತಿಯಲ್ಲಿನ ಜನರಿಗೆ ಪುನಃ ಪ್ರಸಾರದ ಕಾರ್ಯಕ್ರಮಗಳನ್ನು ವೀಕ್ಷಿಸಲು ಸಾಧ್ಯವಾಗಿದೆ.

### ಪ್ರವಾಸ ಮತ್ತು ಪ್ರವಾಸಿ ಸೌಲಭ್ಯಗಳು

ತಲಕಾವೇರಿಯಂತಹ ಪ್ರಸಿದ್ಧ ಪುಣ್ಯಕ್ಷೇತ್ರ, ನಾಗರಹೊಳೆ ವನ್ಯಧಾಮ ಹಾಗೂ ನಿಸರ್ಗರಮಣೀಯ ನಿತ್ಯಹರಿದ್ವರ್ಣ ಕಾಡುಗಳನ್ನು ನೋಡಲು ಪ್ರವಾಸಿಗಳು ಕೊಡಗಿಗೆ ಭೇಟಿ ನೀಡುತ್ತಾರೆ. ಈ ಜಿಲ್ಲೆಗೆ ಭೇಟಿ ನೀಡಲು ಉತ್ತಮ ಕಾಲ ಎಂದರೆ ಅಕ್ಟೋಬರ್‌ನಿಂದ ಮೇ ತಿಂಗಳವರೆಗೆ. ಇಲ್ಲಿನ ರಸ್ತೆಗಳು ಚೆನ್ನಾಗಿದ್ದು ಸರ್ಕಾರಿ ಮತ್ತು ಖಾಸಗಿ ಬಸ್ಸುಗಳು ಜಿಲ್ಲೆಯಾದ್ಯಂತ ಓಡಾಡುತ್ತವೆ. ಇಲ್ಲಿಗೆ ಬರುವ ಪ್ರವಾಸಿಗಳು ಅಥವಾ ಯಾತ್ರಿಕರಿಗೆ ತಂಗುವುದಕ್ಕೆ ಈ ಕೆಳಕಂಡ ಸ್ಥಳಗಳಲ್ಲಿ ಛತ್ರಗಳ ಸೌಲಭ್ಯವಿದೆ : 1) ಇಗ್ಗುತಪ್ಪ ದೇವಸ್ಥಾನ, ಪಾಡಿ (ಕಕ್ಕಬ್ಬೆ) 2) ಭಗಂಡೇಶ್ವರ ದೇವಸ್ಥಾನ, ಭಾಗಮಂಡಲ, 3) ಕಾವೇರಿ ನದಿಯ ಉಗಮ ಸ್ಥಾನವಾದ ತಲಕಾವೇರಿ, 4) ಮಡಿಕೇರಿ 5) ರಾಮೇಶ್ವರ ದೇವಸ್ಥಾನ, ಇರಪು. ನಾಗರಹೊಳೆಯ ವನ್ಯಧಾಮದಲ್ಲಿ ಅರಣ್ಯ ಇಲಾಖೆಯ ವಸತಿ

ಯಿಂದ ನಿರ್ವಹಿಸಲ್ಪಡುತ್ತಿರುವ ತಂಗುದಾಣಗಳಿವೆ. 24 ಹಾಸಿಗೆಗಳ ಸೌಲಭ್ಯವಿದೆ. ಬೇಡಿಕೆಯ ಮೇರೆಗೆ ಊಟದ ವ್ಯವಸ್ಥೆಯಿದೆ.

ಮುಖ್ಯ ಸ್ಥಳಗಳಾದ ಮಡಿಕೇರಿ, ಸೋಮವಾರಪೇಟೆ ಮತ್ತು ವೀರರಾಜಪೇಟೆ ಹಾಗೂ ಇತರ ಕೆಲವು ಕಡೆಗಳಲ್ಲಿ (ಭಾಗಮಂಡಲ, ನಾಪೋಕ್ಲು, ಕುಶಾಲನಗರ, ಶನಿವಾರಸಂತೆ, ಸುಂಟಿಕೊಪ್ಪ, ಪೊನ್ನಂಪೇಟೆ, ಶ್ರೀಮಂಗಲ) ಲೋಕೋಪಯೋಗಿ ಇಲಾಖೆಯ ನಿರೀಕ್ಷಣಾ ಮತ್ತು ಪ್ರವಾಸೀ ಮಂದಿರಗಳಿವೆ. ಮಡಿಕೇರಿಯಲ್ಲಿ ಸುದರ್ಶನ ಅತಿಥಿಗೃಹವಿದೆ. ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಒಂದು ಉತ್ತಮವಾದ ಪ್ರವಾಸಿ ಗೃಹವನ್ನು ಮಡಿಕೇರಿಯಲ್ಲಿ ನಿರ್ಮಿಸಿದೆ. ಇದು ಪ್ರಸಿದ್ಧ ರಾಜಾಸೀಟ್‌ಗೆ ಸಮೀಪದಲ್ಲಿದೆ. ಅರಣ್ಯ ಇಲಾಖೆಯು ತನ್ನ ನೌಕರರ ಸಲುವಾಗಿ ಹಲವಾರು ಅತಿಥಿ ಗೃಹಗಳನ್ನು ಹೊಂದಿದೆ. ಇವುಗಳಿರುವ ಸ್ಥಳಗಳು ಹೀಗಿವೆ: ತಿತಿಮತಿ-ತಿತಿಮತಿ ವಲಯ, ಬಾಳೇಕೊಪ್ಪ–ನಾಗರಹೊಳೆ ವಲಯ, ಮಾಕುಟ್ಟ–ಮಾಕುಟ್ಟ ವಲಯ, ಮಂಡ್ರೋತ್–ಮಂಡ್ರೋತ್ ವಲಯ, ತಲಕಾವೇರಿ–ಭಾಗಮಂಡಲ ವಲಯ, ಮಡಿಕೇರಿ–ಮಡಿಕೇರಿ ವಲಯ, ದುಬಾರೆ–ಕುಶಾಲನಗರ ವಲಯ, ಕೋಯಿನಾಡು–ಸಂಪಾಜೆ ವಲಯ.